3/5

Umar Teekay

ಮಾಹಿತಿ ಬೂಕು

## ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ (ರಿ), ಮೈಕಾಲ

ಪಿನ್ನೆ

## ಚಿಕ್ಕಮಗಳೂರು ಜಿಲ್ಲಾ ಬ್ಯಾರಿಜಲೊ ಒಕ್ಕೂಟ (ರಿ)


ಇಜಲೊ ಜಂಟಿ ಆಶ್ರಯತ್ತ್‌ಲ್

# ನಾಲನೇ ಬ್ಯಾರಿ ಸಾಹಿತ್ಯ ಸಮ್ಮೇಳನ

**ತಾರೀಕ್ 27-02-2007, ಚೊವ್ವಾಸೆ ಸುಬೆಲೆ 8 ಗಂಟೆರೊ ಜಾವು 10 ಗಂಟೆ ತೋಲೊ**

**ಜಾಗೆ : ಜಿಲ್ಲಾ ಒಕ್ಕಲಿಗರ ಸಮುದಾಯ ಭವನ, ಚಿಕ್ಕಮಗಳೂರು**

**ಮರ್‌ಹೂಮ್ ಕೋಡಿ ಮ್ಯೊದಿನ್ ಕುಟ್ಟಿ ಹಾಜಿ (ಮೂಡಿಗೆರೆ) ಮೇಲ್ತೆನೆ**



ಸಮ್ಮೇಳನಾಧ್ಯಕ್ಷ

**ಜನಾಬ್ ಫಕೀರ್ ಮುಹಮ್ಮದ್ ಕಟ್ಪಾಡಿ**

ಸ್ವಾಗತ ಸಮಿತಿ

**ನಾಲನೇ ಬ್ಯಾರಿ ಸಾಹಿತ್ಯ ಸಮ್ಮೇಳನ**

ಆಫೀಸ್ : ಅಲ್-ಬದ್ರಿಯಾ ಕಾಂಪ್ಲೆಕ್ಸ್, ನೆಹರು ನಗರ, ಚಿಕ್ಕಮಗಳೂರು - 577 101

ಫೋನ್ : 94484 22024, 98452 19329, 98445 84050

ಮೈಕಾಲ್ತ್‌ಲ್ ಸಂಪರ್ಕ : 98450 54191 (ಉಮರ್ ಯು.ಹೆಚ್.)

• ಸಾಹಿತ್ಯತ್ತ್‌ಲ್ ಸಮೃದ್ಧಿ • ಶಿಕ್ಷಣತ್ತ್‌ಲ್ ಅಭಿವೃದ್ಧಿ • ಭದ್ರತೆಗಾಯಿಟ್ಟ್ ಒರುಮೆಪ್ಪಾಡ್



# ನಾಲ್ಕನೇ ಬ್ಯಾರಿ ಸಾಹಿತ್ಯ ಸಮ್ಮೇಳನಾಧ್ಯಕ್ಷ ಫಕೀರ್ ಮುಹಮ್ಮದ್ ಕಟ್ಪಾಡಿ

# ಕಿರು ಪರಿಚಯ

ಫಕೀರ್ ಮುಹಮ್ಮದ್ ಕಟ್ಪಾಡಿ ಇವರ ಪೂರ್ಣ ಹೆಸರು ಫಕೀರ್ ಮುಹಮ್ಮದ್ ಬ್ಯಾರಿ ಕಟ್ಪಾಡಿ. ಇವರು ಉಡುಪಿ ಜಿಲ್ಲೆಯ ಬಾರಕೂರುನಲ್ಲಿ 25-06-1949ರಲ್ಲಿ ಜನಿಸಿದರು. ಬೆಳೆದದ್ದು ಕಟಪಾಡಿಯಲ್ಲಿ. ಇವರ ತಂದೆ ದಿವಂಗತ ಖತೀಬ್ ಕುಂಞಿ ಅಹ್ಮದ್. ಇವರು ಕಟ್ಪಾಡಿಯ ಜುಮಾ ಮಸೀದಿಯಲ್ಲಿ 35 ವರ್ಷಗಳಿಗೂ ಅಧಿಕ ಕಾಲ ಖಾಝಿ/ಖತೀಬ್ ಆಗಿದ್ದವರು. ಮದ್ರಸಾದಲ್ಲಿ ಮಕ್ಕಳಿಗೆ ಧಾರ್ಮಿಕ ವಿದ್ಯಾಭ್ಯಾಸ ಕೊಡುವ ಗುರುಗಳಾಗಿಯೂ ಕಾರ್ಯ ನಿರ್ವಹಿಸಿದರು. ತಾಯಿ ದಿವಂಗತ ಆಮಿನಾ ಬೀಬಿ. ಬಾರಕೂರಿನ ಪ್ರಸಿದ್ಧ ಕಡವಿನ ಬಾಗಿಲು ದಿವಂಗತ ಕುಂಞಿಮೈನ್ ಬ್ಯಾರಿಯವರ ನಾಲ್ಕನೆಯ ಮಗಳು.

ಬಿ.ಕಾಂ. ಪದವೀಧರರಾದ ಇವರ ಪ್ರಾಥಮಿಕ ವಿದ್ಯಾಭ್ಯಾಸ 5ನೇ ತರಗತಿಯವರೆಗೆ ಕಟ್ಪಾಡಿಯ ಬೋರ್ಡ್ ಹಿಂದುಸ್ಥಾನಿ ಉರ್ದು ಶಾಲೆಯಲ್ಲಿ, 7-8ನೇ ತರಗತಿ ಶ್ರೀ ವೆಂಕಟರಮಣ ಸ್ವಾಮಿ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ, ಹೈಸ್ಕೂಲ್ ವಿದ್ಯಾಭ್ಯಾಸ ಕಟ್ಪಾಡಿಯ ಶ್ರೀ ವೆಂಕಟರಮಣ ಸ್ವಾಮಿ ಹೈಸ್ಕೂಲ್‌ನಲ್ಲಿ, ಕಾಲೇಜು ವಿದ್ಯಾಭ್ಯಾಸ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ನಡೆಯಿತು.

ಇವರು ಪ್ರಾರಂಭದಲ್ಲಿ ಭಾರತೀಯ ಸ್ಟೇಟ್‌ಬ್ಯಾಂಕ್‌ನ ಉಡುಪಿ ಶಾಖೆಯಲ್ಲಿ ಕ್ಲರ್ಕ್ ಆಗಿ ಉದ್ಯೋಗಕ್ಕೆ ಸೇರಿದರು. ಅನಂತರ ಅಧಿಕಾರಿಯಾಗಿ ಭಡ್ತಿಗೊಂಡು, ಮೂಲ್ಕಿಯ ಕಾರ್ನಾಡು ಶಾಖೆ ಮತ್ತು ಮಂಗಳೂರಿನ ಸಿಲ್ವರ್‌ಗೇಟ್ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕರಾಗಿ, ಪ್ರಸ್ತುತ ಭಾರತೀಯ ಸ್ಟೇಟ್‌ಬ್ಯಾಂಕ್‌ನ ಬೆಂಗಳೂರು ವಲಯ ಕಚೇರಿ ಆರ್.ಎ.ಸಿ.ಪಿ.ಸಿ.ಯಲ್ಲಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ವಿದ್ಯಾರ್ಥಿಯಾಗಿದ್ದಾಗಲೇ ಇವರಿಗೆ ಸಾಹಿತ್ಯದಲ್ಲಿ ಅಪಾರ ಆಸಕ್ತಿ. ಕುರ್‌ಆನ್ ಕಲಿಯುವುದರ ಜೊತೆಗೆ ಮಾಲೆ, ಖಿಸ್ಸ, ಮೌಲೂದು,ಮಾಪ್ಪಾ ಪಾಟುಗಳನ್ನು ಓದುವುದರಿಂದ ಹಿಡಿದು ಸಂಬಂಧಪಟ್ಟ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಕನ್ನಡ ಪತ್ರಿಕೆಗಳು, ಕಥೆ, ಕಾದಂಬರಿಗಳನ್ನು ಓದುವ ಹವ್ಯಾಸವೂ ಬೆಳೆಯಿತು. ಜೊತೆಗೆ ರಾಮಾಯಣ, ಮಹಾಭಾರತ ಕೃತಿಗಳನ್ನು ನೆರೆಮನೆಯ ದೇಜು ಮಾಸ್ತರರ ಮನೆಯಲ್ಲಿ ಓದುವ ಅವಕಾಶ ಸಿಕ್ಕಿತು. ಜಾನಪದ ಕಲೆಗಳಾದ ಯಕ್ಷಗಾನ, ಭೂತಗಳ ಕೋಲ, ಬ್ಯಾರಿ ಜಾನಪದ ಕಲೆಗಳಾದ ಕೋಲ್‌ಕಲಿ, ದಪ್ಪು, ಮೈಲಾಂಜಿ, ಒಪ್ಪನೆ ಪಾಟ್ ಮುಂತಾದವುಗಳನ್ನು ವೀಕ್ಷಿಸುವ ಅವಕಾಶ ದೊರಕಿತು. ಮನೆ ಪರಿಸರದಲ್ಲಿ ಕೆಳ ಜಾತಿಯ ಹಿಂದೂಗಳು, ಶ್ರಮಜೀವಿಗಳಾದ ಮೀನುಗಾರರು, ಕೃಷಿಕರು, ಕೂಲಿಕಾರ್ಮಿಕರ ಬದುಕಿನ ಬವಣೆ ತಿಳಿಯುವ, ಅನುಭವಿಸುವ ಎಲ್ಲಾ ರೀತಿಯ ಅನುಭವಗಳನ್ನು ಪಡೆಯುವ ಅವಕಾಶ ದೊರೆಯಿತು. ಹೈಸ್ಕೂಲ್ ಓದುತ್ತಿರುವಾಗ ಒಮ್ಮೆ ಸಮಾರಂಭವೊಂದರಲ್ಲಿ ಬುಡಕೇರಿಯ ದಿವಂಗತ ಪೂಕೋಯ ತಂಙಲ್‌ರು ಮಹಾಭಾರತ ಯುದ್ಧ ಮತ್ತು ಬದ್ರ್ ಯುದ್ಧಗಳ ಅನಿವಾರ್ಯತೆ, ಈ ಎರಡೂ ಯುದ್ಧಗಳ ಸಂದರ್ಭಗಳ ಬಗ್ಗೆ ನೀಡಿದ ವಿವರವಾದ ಭಾಷಣ ಇವರ ಮೇಲೆ ಬಹಳ ಪ್ರಭಾವ ಬೀರಿತು. ಸಹೋದರ ಸಮುದಾಯದವರಲ್ಲಿ ಮುಸ್ಲಿಮ್ ಸಮುದಾಯದ ಬಗ್ಗೆ ಇರುವ ವಿಕೃತ ಅಭಿಪ್ರಾಯಗಳು ಮುಖ್ಯವಾಗಿ ಬ್ಯಾರಿ ಸಮುದಾಯದ ಬಗ್ಗೆ ಇರುವ ಕೀಳು ಅಭಿಪ್ರಾಯಗಳು, ಮನಸ್ಸನ್ನು ಕುಕ್ಕುತ್ತಿರುವ ಸಂದರ್ಭಗಳು ಎದುರಾಗುತ್ತಲೇ ಬೆಳೆದ ಇವರು ಕಟ್ಪಾಡಿಯ ಮುಸ್ಲಿಮರ ಮಧ್ಯೆ ಪ್ರಥಮ ಪದವೀಧರರಾದರು. ಕನ್ನಡ ಸಾಹಿತ್ಯದಲ್ಲಿ ಮುಸ್ಲಿಮ್ ಅನುಭವಗಳು ಮುಖ್ಯ ಪಾತ್ರವಹಿಸಿದವು. ಅನಂತರ ತನ್ನ ಅನುಭವಗಳನ್ನು ಒಂದೊಂದಾಗಿ ಇವರು ಕೃತಿಗೆ ಇಳಿಸಲು ಪ್ರಾರಂಭಿಸಿದರು.

ಗೋರಿಕಟ್ಟಿಕೊಂಡವರು, ನೋಂಬು, ದೇಜ್ಞಾಲ ಇವರ ಅನುಭವದ ಮೂಸೆಯಿಂದ ಮೂಡಿ ಬಂದ ಕಥಾ ಸಂಕಲನಗಳು. ಸರಕುಗಳು, ಕಚ್ಚಾದ ಕಾದಂಬರಿಗಳು, ಕೇರಳದಲ್ಲಿ ಹದಿನೈದು ದಿನಗಳು, ಪ್ರವಾಸ ಕಥನ, ಕಯ್ಯೂರಿನ ರೈತ ವೀರರು, ಇತಿಹಾಸ ಹಾಗೂ ರಾಷ್ಟ್ರೀಯತೆ ಮತ್ತು ಮುಸ್ಲಿಮರು ಲೇಖನ ಸಂಗ್ರಹ ಇವರ ಕೃತಿಗಳು. ಮೇಲಿನ ಕೃತಿಗಳ ಹಲವು ಬಿಡಿ ಕಥೆಗಳು ಹಿಂದಿ, ಇಂಗ್ಲೀಷ್, ಗುಜರಾತಿ, ಮರಾಠಿ, ಬೆಂಗಾಲಿ ಹಾಗೂ ಮಲಯಾಳಂ ಭಾಷೆಗಳಿಗೆ ಅನುವಾದಗೊಂಡಿವೆ. ಇತ್ತೀಚೆಗೆ 'ಕಚ್ಚಾದ' ಕಾದಂಬರಿಯು ಮಲಯಾಳಂ ಭಾಷೆಗೆ ಅನುವಾದಗೊಂಡು ಮಾತೃಭೂಮಿ ಪ್ರಕಾಶನದವರು ಪುಸ್ತಕ ರೂಪದಲ್ಲಿ ತರುತ್ತಿದ್ದಾರೆ. ಇದಲ್ಲದೆ ಇವರ ಅನೇಕ ಬ್ಯಾರಿ ಜಾನಪದ ಕಥೆಗಳು, ಬ್ಯಾರಿ ಭಾಷೆ, ಸಾಹಿತ್ಯ ಸಂಸ್ಕೃತಿಗೆ ಸಂಬಂಧಪಟ್ಟ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಕನ್ನಡದ ದಿಟ್ಟ ಹಾಗೂ ಅಪೂರ್ವ ಪ್ರತಿಭೆಯಾದ ಕಟ್ಪಾಡಿಯವರಿಗೆ 1991ರಲ್ಲಿ ರಾಷ್ಟ್ರೀಯ ಪುರಸ್ಕಾರ, 2001ರಲ್ಲಿ ಕನ್ನಡ ರಾಜ್ಯೋತ್ಸವ ಪುರಸ್ಕಾರ, 2002ರಲ್ಲಿ ತುಳು ಶ್ರೀ ಪುರಸ್ಕಾರ ಹಾಗೂ 'ದೇಜ್ಞಾಲ' ಕಥಾ ಸಂಕಲನಕ್ಕೆ 2001ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡಮಿ ಪುರಸ್ಕಾರಗಳು ದೊರೆತಿವೆ.

ಫಕೀರ್ ಮುಹಮ್ಮದ್ ಕಟ್ಪಾಡಿಯವರ ಅಧ್ಯಕ್ಷತೆಯಲ್ಲಿ ಚಿಕ್ಕಮಗಳೂರಿನಲ್ಲಿ 27-2-2007ರಲ್ಲಿ ನಡೆಯಲಿರುವ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನ ಬ್ಯಾರಿ ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದರೊಂದಿಗೆ ಬ್ಯಾರಿ ಸಮುದಾಯವು ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಪ್ರೇರಣೆಯಾಗಲಿದೆ.

# ಕಾರ್ಯಕ್ರಮಗಳ ವಿವರ

**4ನೇ ಬ್ಯಾರಿ ಸಾಹಿತ್ಯ ಸಮ್ಮೇಳನ ದಿನಾಂಕ 27-02-2007, ಚಿಕ್ಕಮಗಳೂರು**

ಬೆಳಿಗ್ಗೆ 6-00 ರಿಂದ 7-00 : ಸಭಾಂಗಣಕ್ಕೆ ಸ್ವಾಗತ ಸಮಿತಿ ಸದಸ್ಯರ ಆಗಮನ ಮತ್ತು ಜವಾಬ್ದಾರಿ ಸ್ವೀಕಾರ

ಬೆಳಿಗ್ಗೆ 8-00 ರಿಂದ 9-00 : ಉಪ್ಪಳ್ಳಿ ಮುಖಾಂ ಬಳಿಯಿಂದ ಸಭಾಂಗಣಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ.
ಮೆರವಣಿಗೆ ಉದ್ಘಾಟನೆ : ಜನಾಬ್ ಬಿ.ಎ. ಹಸನಬ್ಬ

ಬೆಳಿಗ್ಗೆ 9-00 ರಿಂದ 9-30 : ಬೆಳಗ್ಗಿನ ಉಪಹಾರ

ಬೆಳಿಗ್ಗೆ 9-30 ರಿಂದ 9-35 : ಧ್ವಜಾರೋಹಣ
ರಾಷ್ಟ್ರಧ್ವಜ : ಜನಾಬ್ ಬಿ.ಎ. ಮೊಹಿದಿನ್
ಪರಿಷತ್ ಧ್ವಜ : ಜನಾಬ್ ಎಂ.ಬಿ. ಅಬ್ದುಲ್ ರಹ್ಮಾನ್

ಬೆಳಿಗ್ಗೆ 9-35 ರಿಂದ 9-40 : ಧ್ವಜಗೀತೆ : ಜನಾಬ್ ಶರೀಫ್ ನಿರ್ಮುಂಜೆ

ಬೆಳಿಗ್ಗೆ 9-40 ರಿಂದ 9-45 : ಪುಸ್ತಕ ಪ್ರದರ್ಶನ ಉದ್ಘಾಟನೆ : ಶ್ರೀ ಸಿ.ಟಿ. ರವಿ

**ಉದ್ಘಾಟನಾ ಸಮಾರಂಭ : ಬೆಳಿಗ್ಗೆ 9-45 ರಿಂದ ಮಧ್ಯಾಹ್ನ 11-00ರ ತನಕ**

| | | |
|---|---|---|
| 09-45 ರಿಂದ 09-50 | (05 ನಿಮಿಷ) | ಕಿರಾಅತ್ |
| 09-50 ರಿಂದ 10-00 | (10 ನಿಮಿಷ) | ಸ್ವಾಗತ : ಜನಾಬ್ ಕೆ. ಮಹಮದ್ |
| 10-00 ರಿಂದ 10-05 | (05 ನಿಮಿಷ) | ಧ್ಯೇಯಗೀತೆ : ಜನಾಬ್ ಶರೀಫ್ ನಿರ್ಮುಂಜೆ |
| 10-05 ರಿಂದ 10-15 | (10 ನಿಮಿಷ) | ಪ್ರಾಸ್ತಾವನೆ : ಜನಾಬ್ ಎಂ.ಬಿ. ಅಬ್ದುಲ್ ರಹ್ಮಾನ್ |
| 10-15 ರಿಂದ 10-30 | (15 ನಿಮಿಷ) | ಉದ್ಘಾಟನಾ ಭಾಷಣ : ಶ್ರೀ ಎಂ. ವೀರಪ್ಪ ಮೊಯಿಲಿ |
| 10-30 ರಿಂದ 10-35 | (05 ನಿಮಿಷ) | ಪುಸ್ತಕಗಳ ಬಿಡುಗಡೆ : ಜನಾಬ್ ಅಬ್ದುಲ್ ರಹೀಮ್ ಟೀಕೆ |
| 10-35 ರಿಂದ 10-45 | (10 ನಿಮಿಷ) | ಭಾಷಣ : ಜನಾಬ್ ಅಬ್ದುಲ್ ರಹೀಮ್ ಟೀಕೆ |
| 10-45 ರಿಂದ 10-50 | (05 ನಿಮಿಷ) | ಕ್ಯಾಸೆಟ್ ಬಿಡುಗಡೆ : ಜನಾಬ್ ಬಶೀರ್ ಬೈಕಂಪಾಡಿ |
| 10-50 ರಿಂದ 11-00 | (10 ನಿಮಿಷ) | ಭಾಷಣ : ಜನಾಬ್ ಬಶೀರ್ ಬೈಕಂಪಾಡಿ |

**ಮುಖ್ಯ ಅತಿಥಿಗಳ ಭಾಷಣ**

| | | |
|---|---|---|
| 11-00 ರಿಂದ 11-10 | (10 ನಿಮಿಷ) | ಜನಾಬ್ ಬಿ.ಎ. ಹಸನಬ್ಬ |
| 11-10 ರಿಂದ 11-20 | (10 ನಿಮಿಷ) | ಜನಾಬ್ ಬಿ.ಎ. ಮೊಹಿದಿನ್ |
| 11-20 ರಿಂದ 11-30 | (10 ನಿಮಿಷ) | ಶ್ರೀ ಸಿ.ಟಿ. ರವಿ |
| 11-30 ರಿಂದ 11-40 | (10 ನಿಮಿಷ) | ಶ್ರೀಮತಿ ಡಿ.ಕೆ. ತಾರಾದೇವಿ ಸಿದ್ಧಾರ್ಥ |

| | | |
|---|---|---|
| 11-40 ರಿಂದ 12-00 | (20 ನಿಮಿಷ) | ಬ್ಯಾರಿ ಗಣ್ಯರಿಗೆ ಸನ್ಮಾನ<br>**ಜನಾಬ್ ಜಿ.ಎ.ಬಾವಾ**<br>**ಡಾ। ಬಿ.ಎಂ. ಅಬ್ದುಲ್ ಖಾದರ್**<br>**ಜನಾಬ್ ಇದಿನಬ್ಬ ಬ್ಯಾರಿ**<br>**ಹಾಜಿ ಎ. ಯೂಸುಫ್**<br>**ಜನಾಬ್ ಎಂ.ಹುಸೈನ್ ಅಹ್ಮದ್**<br>**ಝುಬೇರ್ ಅಹ್ಮದ್**<br>**ಜನಾಬ್ ವಸ್ತಾರೆ ಮಹಮ್ಮದ್ ಬ್ಯಾರಿ** |
| 12-00 ರಿಂದ 12-10 | (10 ನಿಮಿಷ) | ಭಾಷಣ : ಜನಾಬ್ ಬಿ.ಎಂ. ಫಾರೂಕ್ |
| 12-10 ರಿಂದ 12-20 | (10 ನಿಮಿಷ) | ಭಾಷಣ : ಜನಾಬ್ ಸೈಯ್ಯದ್ ಮುಹಮ್ಮದ್ ಬ್ಯಾರಿ |
| 12-20 ರಿಂದ 12-30 | (10 ನಿಮಿಷ) | ಭಾಷಣ : ಜನಾಬ್ ಉಮರ್ ಟೀಕೆ |
| 12-30 ರಿಂದ 12-50 | (20 ನಿಮಿಷ) | ಸಮ್ಮೇಳನಾಧ್ಯಕ್ಷರ ಭಾಷಣ : ಜನಾಬ್ ಫಕೀರ್ ಮುಹಮ್ಮದ್ ಕಟ್ಪಾಡಿ |
| 12-50 ರಿಂದ 12-55 | (05 ನಿಮಿಷ) | ಅತಿಥಿ ಗಣ್ಯರಿಗೆ ನೆನಪಿನ ಕಾಣಿಕೆ |
| 12-55 ರಿಂದ 01-00 | (05 ನಿಮಿಷ) | ಧನ್ಯವಾದ : ಜನಾಬ್ ಬಿ.ಹೆಚ್. ನೂರ್ ಮುಹಮ್ಮದ್ |

ಕಾರ್ಯಕ್ರಮ ನಿರೂಪಣೆ : ಜನಾಬ್ ಹಮೀದ್ ಪಾಳ್ಯ (ಟಿವಿ 9)

**ಮಧ್ಯಾಹ್ನ1-00 ರಿಂದ 2-00ರ ತನಕ ನಮಾಝ್ ಮತ್ತು ಊಟದ ವಿರಾಮ**

**ಮಧ್ಯಾಹ್ನ 2-00 ರಿಂದ 4-00ರ ತನಕ ಸಮ್ಮೇಳನಾಧ್ಯಕ್ಷರ ಸಲಹೆಗಳ ಮೇಲೆ ಚರ್ಚಾಗೋಷ್ಠಿ**

| | | |
|---|---|---|
| ಚರ್ಚಾಪೀಠದಲ್ಲಿ | : | ಮೌಲಾನ ಕೆ. ಅಬ್ದುಲ್ ಅಝೀಝ್ ದಾರಿಮಿ<br>ಜನಾಬ್ ಬಿ.ಎಂ. ಹನೀಫ್<br>ವೈ. ಮಹಮ್ಮದ್ ಬ್ಯಾರಿ<br>ಯು.ಟಿ. ಖಾದರ್ ಮತ್ತು ಬ್ಯಾರಿ ಸಂಘಟನೆಗಳ ಗಣ್ಯರು |
| ನಿರೂಪಣೆ | : | ಜನಾಬ್ ಉಮರ್ ಟೀಕೆ ಮತ್ತು ಬಿ.ಎ. ಮಹಮ್ಮದ್ ಆಲಿ |

ಅತಿಥಿಗಳಿಗೆ ನೆನಪಿನ ಕಾಣಿಕೆ, ಧನ್ಯವಾದ

**ಸಂಜೆ 4-00 ರಿಂದ 4-30 ನಮಾಝ್ ಮತ್ತು ಚಹಾ ವಿರಾಮ**

**ಸಮಾರೋಪ ಸಮಾರಂಭ (ಸಂಜೆ 4-30 ರಿಂದ 6-30ರ ತನಕ)**

| | | |
|---|---|---|
| 4-30 ರಿಂದ 4-40 | (10 ನಿಮಿಷ) | ಸ್ವಾಗತ : ಜನಾಬ್ ಕೆ. ಮಹಮದ್ |
| 4-40 ರಿಂದ 4-45 | (05 ನಿಮಿಷ) | ಧ್ಯೇಯಗೀತೆ : ಜನಾಬ್ ಶರೀಫ್ ನಿರ್ಮುಂಜೆ |
| 4-45 ರಿಂದ 4-50 | (05 ನಿಮಿಷ) | ಪ್ರಾಸ್ತಾವನೆ : ಜನಾಬ್ ಉಮರ್ ಟೀಕೆ |
| 4-50 ರಿಂದ 4-55 | (05 ನಿಮಿಷ) | ಬ್ಯಾರಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ |

ಮುಖ್ಯ ಅತಿಥಿಗಳ ಭಾಷಣ

| | | |
|---|---|---|
| 4-55 ರಿಂದ 5-05 | (10 ನಿಮಿಷ) | ಜನಾಬ್ ಸಿ.ಆರ್. ಸಗೀರ್ ಅಹ್ಮದ್ |
| 5-05 ರಿಂದ 5-15 | (10 ನಿಮಿಷ) | ಶ್ರೀಮತಿ ಮೋಟಮ್ಮ |
| 5-15 ರಿಂದ 5-25 | (10 ನಿಮಿಷ) | ಡಾ| ಎಂ. ಮೋಹನ್ ಆಳ್ವ |
| 5-25 ರಿಂದ 5-35 | (10 ನಿಮಿಷ) | ಶ್ರೀ ಎಸ್.ಎಲ್. ಧರ್ಮೇಗೌಡ |
| 5-35 ರಿಂದ 5-40 | (05 ನಿಮಿಷ) | ಶ್ರೀ ಜಿ. ಭೀಮೇಶ್ವರ ಜೋಷಿ |
| 5-40 ರಿಂದ 5-45 | (05 ನಿಮಿಷ) | ಶ್ರೀ ಡಿ.ಬಿ. ಚಂದ್ರೇಗೌಡ |
| 5-45 ರಿಂದ 5-50 | (05 ನಿಮಿಷ) | ಸಮ್ಮೇಳನಾಧ್ಯಕ್ಷರಿಗೆ ಸನ್ಮಾನ |
| 5-50 ರಿಂದ 5-55 | (05 ನಿಮಿಷ) | ಸಮ್ಮೇಳನಾಧ್ಯಕ್ಷರ ನುಡಿ : ಜನಾಬ್ ಫಕೀರ್ ಮುಹಮ್ಮದ್ ಕಟ್ಪಾಡಿ |
| 5-55 ರಿಂದ 6-05 | (10 ನಿಮಿಷ) | ಸಮಾರೋಪ ಭಾಷಣ : ಶ್ರೀ ಬಿ.ಎಲ್. ಶಂಕರ್ |
| 6-05 ರಿಂದ 6-10 | (05 ನಿಮಿಷ) | ನಿರ್ಣಯ ಮಂಡನೆ : ಜನಾಬ್ ಉಮರ್ ಯು.ಹೆಚ್. |
| 6-10 ರಿಂದ 6-25 | (15 ನಿಮಿಷ) | ಅಧ್ಯಕ್ಷರ ಭಾಷಣ : ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ |
| 6-25 ರಿಂದ 6-30 | (05 ನಿಮಿಷ) | ಅತಿಥಿಗಳಿಗೆ ನೆನಪಿನ ಕಾಣಿಕೆ ಮತ್ತು ಧನ್ಯವಾದ |

**ಸಂಜೆ 6-30 ರಿಂದ 7-00ರ ವರೆಗೆ ನಮಾಝ್ ವಿರಾಮ**

**ಬ್ಯಾರಿ ಕವಿಗೋಷ್ಠಿ ಸಂಜೆ 7-00 ರಿಂದ 8-00ರ ತನಕ**

| | | | |
|---|---|---|---|
| ಅಧ್ಯಕ್ಷತೆ | : | ಜನಾಬ್ ಮುಹಮ್ಮದ್ ಬಡ್ಡೂರು | |
| ಭಾಗವಹಿಸುವ ಕವಿಗಳು | : | ಜನಾಬ್ ಇಬ್ರಾಹೀಂ ತಣ್ಣೀರುಬಾವಿ | ಜನಾಬ್ ಬಿ.ಎ. ಶಂಶುದ್ದೀನ್ ಮಡಿಕೇರಿ |
| | | ಜನಾಬ್ ರಹೀಮ್ ಬಿ.ಸಿ. ರೋಡ್ | ಜನಾಬ್ ಮುಹಮ್ಮದ್ ಕುಳಾಯಿ |
| | | ಜನಾಬ್ ಹುಸೈನ್ ಕಾಟಿಪಳ್ಳ | ಜನಾಬ್ ಬಶೀರ್ ಅಹ್ಮದ್ ಕಿನ್ಯಾ |
| | | ಜನಾಬ್ ಎಂ. ಶರೀಫ್ ನಿರ್ಮುಂಜೆ | ಜನಾಬ್ ಜಲೀಲ್ ಮುಕ್ರಿ |
| ನಿರೂಪಣೆ | : | ಬಿ.ಎ. ಮುಹಮ್ಮದ್ ಆಲಿ | |
| ಸ್ವಾಗತ | : | ಉಮರ್ ಯು.ಹೆಚ್. | |

ನೆನಪಿನ ಕಾಣಿಕೆ, ಧನ್ಯವಾದ

**ಬ್ಯಾರಿ ಸಾಂಸ್ಕೃತಿಕ ಕಾರ್ಯಕ್ರಮಗಳು (ರಾತ್ರಿ ಗಂಟೆ 8-00 ರಿಂದ 10-00ರ ತನಕ)**

**ಬ್ಯಾರಿ ದಪ್ಪುಕಲಿ :** ಜನಾಬ್ ನೂರ್ ಮುಹಮ್ಮದ್ ನಿರ್ದೇಶನದಲ್ಲಿ ಚಿಕ್ಕಮಗಳೂರು ಮದ್ರಸ ವಿದ್ಯಾರ್ಥಿಗಳಿಂದ

**ಬ್ಯಾರಿ ಕವ್ವಾಲಿ :** ಜನಾಬ್ ಹುಸೈನ್ ಕಾಟಿಪಳ್ಳ, ಜನಾಬ್ ಎಂ. ಶರೀಫ್ ನಿರ್ಮುಂಜೆ ಮತ್ತು ಬಳಗ

**ಬ್ಯಾರಿ ಗಝಲ್ :** ಜನಾಬ್ ಖಾಲಿದ್ ತಣ್ಣೀರುಬಾವಿ

**ಬ್ಯಾರಿ ಹಾಡುಗಳು :** ಜನಾಬ್ ಅಶ್ರಫ್ ಅಪೋಲೊ ಕಲ್ಲಡ್ಕ, ಜನಾಬ್ ಬಶೀರ್ ಅಹ್ಮದ್ ಕಿನ್ಯಾ

**ಬ್ಯಾರಿ ಚಿರಿಕಲಿ :** ಜನಾಬ್ ಮುಹಮ್ಮದ್ ಆಲಿ ತಣ್ಣೀರುಬಾವಿ, ಜನಾಬ್ ರಿಯಾಝ್ ಅಶ್ರಫ್ ಕಾಟಿಪಳ್ಳ

**ಮಕ್ಕಳ ಕಾರ್ಯಕ್ರಮಗಳು :** ಕೋಳಿಕುಂಞಿ ರೂಪಕ, ಕೆ.ಎಂ. ಹನೀಫ್ ನಿರ್ದೇಶನದಲ್ಲಿ, ಆರ್.ಪಿ.ಜಿ. ಗ್ರೂಪ್ ಮಂಗಳೂರು

**ಬ್ಯಾರಿ ಪ್ರಹಸನ :** ಚೆಲ್ವೈಕಲ್ಲ ಚೆನ್ನೆಂಗ್ ಬೇಜಾರಾವು

ಜನಾಬ್ ಇಬ್ರಾಹೀಂ ತಣ್ಣೀರುಬಾವಿಯವರ ನಿರ್ದೇಶನದಲ್ಲಿ (ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ, ಮಂಗಳೂರು)

**ಸಮಾರೋಪ ಗೀತೆ :** ಜನಾಬ್ ಎಂ. ಶರೀಫ್ ನಿರ್ಮುಂಜೆ ಮತ್ತು ಸಭಾಂಗಣದಲ್ಲಿರುವ ಎಲ್ಲರ ಧ್ವನಿಯೊಂದಿಗೆ

# 4ನೇ ರಾಜ್ಯ ಮಟ್ಟದ ಬ್ಯಾರಿ ಸಾಹಿತ್ಯ ಸಮ್ಮೇಳನ

**ಚಿಕ್ಕಮಗಳೂರು, 27-02-2007**

# ಅಧ್ಯಕ್ಷರ ಭಾಷಣ

**ಮಾನ್ಯ ಬ್ಯಾರಿ ಸಮುದಾಯದ ಹಿರಿಯರೇ, ಕಿರಿಯರೇ, ಮಹಿಳೆಯರೇ ಮತ್ತು ಇಲ್ಲಿ ನೆರೆದಿರುವ ಎಲ್ಲಾ ಸ್ನೇಹಿತರೇ,**

**ಅಸ್ಸಲಾಮು ಅಲೈಕುಂ**

ಸಾಗರದಾಚೆಯಿಂದ ಭಾರತಕ್ಕೆ ಮೊತ್ತಮೊದಲು ಇಸ್ಲಾಮ್‌ಧರ್ಮ, ಕ್ರಿ.ಶ.7ನೇ ಶತಮಾನದ ಆದಿಯಲ್ಲಿ ಮುಹಮ್ಮದ್ ಪೈಗಂಬರರ (ಸ.ಅ.ಸ.) ರಜೀವಿತ ಕಾಲದಲ್ಲಿ ಕೇರಳ ಮತ್ತು ಕರ್ನಾಟಕ ಕರಾವಳಿ ಪ್ರದೇಶದಲ್ಲಿ ಅರಬ್ ವ್ಯಾಪಾರಿಗಳ ಮೂಲಕ ಪ್ರವೇಶಿಸಿತು. ಆ ಕಾಲದಲ್ಲಿ ಸಾಂಸ್ಕೃತಿಕ ಸಮೃದ್ಧಿ ಹೊಂದಿದ್ದು ಸಾಹಿತಿಗಳು, ಇತಿಹಾಸಕಾರರು, ವಿದೇಶಿ ಪ್ರವಾಸಿಗರು ಹಾಡಿ ಹೊಗಳಿ ಕೊಂಡಾಡಿದ್ದ ಬ್ಯಾರಿ ಸಮುದಾಯದ ಜನಗಳು ನಾವು ಎಂಬ ಬಗ್ಗೆ ನಮಗೆ ಹೆಮ್ಮೆ ಇದೆ. 14ನೇ ಶತಮಾನದಲ್ಲಿ ವಿಜಯನಗರ ಅರಸರ ಕಾಲದಲ್ಲಿ ಒಟ್ಟು ಸಮುದಾಯದ ಸಂಘಟನೆಯಾಗಿ "ಹಂಜುಮನ"(ಅಂಜುಮನ್) ಎಂಬ ಹೆಸರಲ್ಲಿ ಇತ್ತು ಎಂಬ ದಾಖಲೆ ಅನೇಕ ಕಡೆ ಸಿಗುತ್ತದೆ. ಮಾತ್ರವಲ್ಲ ಈ ಅರಸರ ಕಾಲದ ಪ್ರಮುಖ ವ್ಯಾಪಾರಿ ಜನಾಂಗವಾಗಿ ಅನೇಕ ಬಿರುದು, ಉಂಬಳಿ, ಸನ್ಮಾನಗಳಿಗೆ ಬ್ಯಾರಿ ಸಮುದಾಯ ಪಾತ್ರವಾಗಿತ್ತು. ಬ್ಯಾರಿ ಸಮುದಾಯ ಎಲ್ಲ ಧರ್ಮೀಯರ ಜೊತೆಗೆ ಸೌಹಾರ್ದ ಸಂಬಂಧವನ್ನು ಹೊಂದಿತ್ತು. ಕಡಲ ತೀರದಲ್ಲಿ ಸಾಗರದಾಚೆ ವಿದೇಶಿ ವ್ಯಾಪಾರ ವಹಿವಾಟುಗಳ ಮುಖ್ಯ ಕಸುಬಾಗಿಸಿಕೊಂಡ ಬ್ಯಾರಿ ಅಥವಾ ವ್ಯಾಪಾರಿ ಸಮುದಾಯಕ್ಕೆ ರಾಜ್ಯದಲ್ಲಿ ಮಹತ್ವದ ಸ್ಥಾನ, ಗೌರವವಿತ್ತು. ಇದರ ಕುರುಹಾಗಿ ಇಂದಿಗೂ ತುಳುನಾಡಿನ ಅನೇಕ ಕಡೆಗಳಲ್ಲಿ, ಹಳೆಯ ಮನೆತನದ ಹೆಸರನ್ನು, ಮೂಲದ ಮಹಾನುಭಾವರ ಹೆಸರುಗಳನ್ನು ಕರೆದು ದೇವಸ್ಥಾನಗಳ ಉತ್ಸವಗಳ ಸಂದರ್ಭಗಳಲ್ಲಿ ಸನ್ಮಾನಿಸುವುದು, ವೀಳ್ಯ ಮರ್ಯಾದೆ ನೀಡುವುದು ಸಂಪ್ರದಾಯವಾಗಿದೆ. ಇದಕ್ಕೆ ಉದಾಹರಣೆಯಾಗಿ ಬಾರಕೂರಿನ ನರಸಿಂಹ ದೇವಸ್ಥಾನ, ಮಂಜೇಶ್ವರದ ಅರಸು ದೈವ ಸಾನಿಧ್ಯ, ಉಡುಪಿ, ಬಸರೂರು, ಮೂಲ್ಕಿಯ ಬಪ್ಪನಾಡು ಮುಂತಾದ ಸ್ಥಳಗಳಲ್ಲಿ ವಾಡಿಕೆಯಾಗಿ ಬಂದಿದೆ. ದೇವಸ್ಥಾನ ಮುಂತಾದ ಪವಿತ್ರ ಸ್ಥಳಗಳ ವಾದ ವಿವಾದಗಳ ತೀರ್ಮಾನದಲ್ಲಿ ಮುಸ್ಲಿಮ್ ಪ್ರಮುಖರು ಭಾಗವಹಿಸಿದ ದಾಖಲೆಗಳಿವೆ. ಉದಾಹರಣೆಗೆ ಡಾ। ವಹ್ಹಾಬ್ ದೊಡ್ಡಮನೆಯವರು ಬರೆದಿರುವ "ಮುಸ್ಲಿಮ್ಸ್ ಇನ್ ದಕ್ಷಿಣ ಕನ್ನಡ" ಎಂಬ ಐತಿಹಾಸಿಕ ಗ್ರಂಥದಲ್ಲಿ ಒಂದು ಘಟನೆಯನ್ನು ಉಲ್ಲೇಖಿಸುತ್ತಾರೆ. 1551ನೇ ಇಸವಿ ಎಪ್ರಿಲ್ 11ನೇ ತಾರೀಕು ಶನಿವಾರದಂದು ಕೋಟೇಶ್ವರ ಕೋಡಿ ಹಬ್ಬದ ಸಂದರ್ಭದಲ್ಲಿ ಮೇಲ್ಜಾತಿ, ಕೆಳಜಾತಿಗಳ ಮಧ್ಯೆ ಭುಗಿಲೆದ್ದ ಘರ್ಷಣೆಯಲ್ಲಿ ಹಲವು ಜನಗಳು ಸತ್ತು ದೀರ್ಘ ಕಾಲದ ತನಕ ದೇವಸ್ಥಾನ ಮುಚ್ಚಲ್ಪಟ್ಟಿತ್ತು. ಆಗ ವಿಜಯನಗರದ ಅರಸರ ಅಧಿಕಾರಿಯಾಗಿದ್ದ ಏಕದಲಖಾನ (ಇಕ್ಬಾಲ್‌ಖಾನ್) ಎಂಬವನು ಇಲ್ಲಿನ ಪ್ರಮುಖರನ್ನು ಕರೆದು ರಾಜಿ ಪಂಚಾಯ್ತಿ ಮಾಡಿ ದೇವಸ್ಥಾನದ ಕಾರ್ಯಕ್ರಮಗಳು ಎಂದಿನಂತೆ ಸುಸೂತ್ರವಾಗಿ ನಡೆಯುವಂತೆ ಸಹಕರಿಸಿದನು ಎಂಬ ಐತಿಹಾಸಿಕ ದಾಖಲೆ ಇದೆ. ಇದಲ್ಲದೆ ಅಂದಿನ ವ್ಯಾಪಾರಿ ಬಪ್ಪಬ್ಯಾರಿ ಮೂಲ್ಕಿಯ ದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಸಹಾಯಮಾಡಿದ್ದು, ಉಡುಪಿಯ ಅಬ್ದುಲ್ಲ ಸೇಟ್ ಅಷ್ಟಮಠಗಳ ಲಕ್ಷದೀಪೋತ್ಸವಕ್ಕೆ, ಅಭಿವೃದ್ಧಿಗೆ ಸಹಕರಿಸಿದ್ದು ಮತ್ತು ಇಂತಹ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ತುಳು ಪಾಡ್ದನಗಳಲ್ಲಿ ಬ್ಯಾರಿಗಳ ಬಗ್ಗೆ ಗೌರವದ ಉಲ್ಲೇಖಗಳಿವೆ. ಬ್ಯಾರಿ ಸಮುದಾಯದ ಮೂಲದಲ್ಲಿ ಸೌಹಾರ್ದತೆಯ ಪರಂಪರೆಯೇ ಅಡಗಿದೆ. ಇದು ಅಲ್-ಬರೂನಿ, ಇಬ್ನ್-ಬತೂತ ಮುಂತಾದ ವಿದೇಶಿ ಯಾತ್ರಿಕರ ಪ್ರವಾಸ ಕೃತಿಗಳಲ್ಲಿ ದಾಖಲೆಯಾಗಿವೆ. ಈ ಸೌಹಾರ್ದತೆಯ ಪರಂಪರೆ ಇಂದಿಗೂ ಬ್ಯಾರಿ ಸಮುದಾಯದ ಒಡಲಲ್ಲಿ ರಕ್ತಗತವಾಗಿದೆ. ಕೋಮುಗಲಭೆ ದ್ವೇಷದ ದಕ್ಷಿಣ ಕನ್ನಡದ ವಾತಾವರಣದ ಹಿನ್ನಲೆಯಲ್ಲಿ ಈ ಪರಂಪರೆಯನ್ನು ನಿಮಗೆ ನೆನಪಿಸಲು ಇಲ್ಲಿ ಇಷ್ಟಪಡುತ್ತೇನೆ.

ಸರ್ವಧರ್ಮ ಸಮನ್ವಯತೆಯ ಹರಿಕಾರ ಸೂಫಿ ಸಂತರು, ಬ್ಯಾರಿಗಳು'ಪಾಡ್‌ರೆ ಔಲಿಯಾ' ಎಂದು ಕರೆಯುವ ಬಾಬಾ ಬುಡಾನ್ ಹಯಾತುಲ್ ಔಲಿಯಾರವರ ಸನ್ನಿಧಿಯಾದ ಚಿಕ್ಕಮಗಳೂರಿನಲ್ಲಿ ಅವರು ಬಿತ್ತಿದ ಕಾಫಿಯ ಸುಗಂಧ ಹರಡಿರುವ ನೆಲದಲ್ಲಿ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನವು ಸಮೃದ್ಧಿ, ಶಿಕ್ಷಣ, ಅಭಿವೃದ್ಧಿ ,ಏಕತೆ, ಸೌಹಾರ್ದದ ಘೋಷಣೆಗಳೊಂದಿಗೆ ವಿಜೃಂಭಣೆಯೊಂದಿಗೆ ನಡೆಯುತ್ತಿರುವುದು ಒಂದು ಐತಿಹಾಸಿಕ ದಾಖಲೆಯೇ ಸರಿ.

**<u>ಭಾರತ ನಿರ್ಮಾಣದಲ್ಲಿ ಬ್ಯಾರಿ ಸಮುದಾಯ</u> :**

ಬ್ಯಾರಿ ಸಮುದಾಯದ ಅನೇಕ ಮಹಾಪುರುಷರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾಡಿನ ರಕ್ಷಣೆಗಾಗಿ ತ್ಯಾಗ, ಬಲಿದಾನ ನೀಡಿದ್ದ ಐತಿಹಾಸಿಕ ದಾಖಲೆಗಳಿವೆ. ಕೃಷಿಕರಾಗಿ, ವ್ಯಾಪಾರದಲ್ಲಿ, ಕರಾವಳಿಯಲ್ಲಿ ಮೀನುಗಾರರಾಗಿ, ಹಾಯಿ ಹಡಗುಗಳನ್ನು ನಡೆಸುವ ನಿಪುಣ ಕಳಾಸಿಗರಾಗಿ ಮಾತ್ರವಲ್ಲ, ನಾಡಿನ ರಕ್ಷಣೆಯ ವೀರ ಯೋಧರಾಗಿ ಕೂಡಾ ಬ್ಯಾರಿಗಳು ಹೆಸರುವಾಸಿಗಳಾಗಿದ್ದಾರೆ. ವಿಜಯನಗರದ ಅರಸರ ಆಸ್ಥಾನದಲ್ಲಿ, ತುಳುವ ಅರಸರ ಕಾಲದಲ್ಲಿ, ಅಜಿಲರು, ಬಂಗರು, ಕೆಳದಿ, ಇಕ್ಕೇರಿ ಅರಸರ ಸಂಸ್ಥಾನದಲ್ಲಿ, ಮೂಸ ಬ್ಯಾರಿಯಂತಹ ಅನೇಕ ಸರದಾರರು ಹೆಸರು ಪಡೆದಿದ್ದರು. ವಿದೇಶಿ ವ್ಯಾಪಾರದ ಪೈಪೋಟಿಯಲ್ಲಿನ ಕೆಲವು ಸಂದರ್ಭಗಳಲ್ಲಿ ನೇರವಾಗಿ ಮತ್ತು ಉಳ್ಳಾಲದ ರಾಣಿ ಅಬ್ಬಕ್ಕ

ದೇವಿಯ ಸರದಾರರಾಗಿ ಪೋರ್ಚುಗೀಸರನ್ನು ಬ್ಯಾರಿ ಸರದಾರರು ಎದುರಿಸಿದರು. ಬ್ರಿಟೀಷರ ವಿರುದ್ಧದ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಗಾಂಧೀಜಿಯವರ ನೇತೃತ್ವದ ಚಳವಳಿಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬ್ಯಾರಿ ಸಮುದಾಯದ ಪ್ರಮುಖರು ಭಾಗವಹಿಸಿದ್ದರು. ಇವರಲ್ಲಿ ಪ್ರಮುಖರು ಫರಂಗಿಪೇಟೆಯ ಜನಾಬ್ ಹುಸ್ಸೈನ್ ಒಡೆಯರ್, ಉಪ್ಪಿನಂಗಡಿಯ ಜನಾಬ್ ಹಕೀಮ್ ಹಾಜಿ ಹಸನ್, ಪುತ್ತೂರಿನ ಜನಾಬ್ ಸಾಲ್ಮರ ಅಬ್ಬುಚ್ಚ, ಉಳ್ಳಾಲದ ಜನಾಬ್ ಬಿ.ಎಂ. ಇದಿನಬ್ಬ ಮುಂತಾದವರು. ಬ್ಯಾರಿಗಳು ಮೂಲತಃ ಗಟ್ಟಿಗರು, ಧೈರ್ಯವಂತರು, ದೇಶಪ್ರೇಮಿಗಳು.

**ಬ್ಯಾರಿ ಭಾಷೆ :**

ಬ್ಯಾರಿ ಭಾಷೆ ಒಂದು ಸುಂದರವಾದ ವೈವಿಧ್ಯಮಯ, ಶಕ್ತಿಯುತ ಭಾಷೆ. ಕಾಸರಗೋಡಿನಿಂದ ಕಾರವಾರದ ತನಕ ಹೆಚ್ಚು ಕಮ್ಮಿ 12 ಲಕ್ಷದಷ್ಟು ಸಂಖ್ಯೆಯಲ್ಲಿರುವ ಬ್ಯಾರಿಗಳು ಮಾತ್ರವಲ್ಲ, ಬೋವಿಗಳು, ಬೆಲ್ಚಡರು ಆಡುವ ಮಾತೃಭಾಷೆ ಇದಾಗಿದೆ. ಆಯಾಯ ಪ್ರಾಂತ್ಯದ ಪರಿಸರಕ್ಕನುಗುಣವಾಗಿ ಅದರದ್ದೇ ಆದ ಮಾತಿನ ಲಯ, ನಯಗಾರಿಕೆಯ ಸೊಗಡನ್ನು ಈ ಭಾಷೆ ಮೈಗೂಡಿಸಿಕೊಂಡಿದೆ. ಪುತ್ತೂರು ಬಂಟ್ವಾಳದವರ ಮಾತಿನ ಲಯ, ಮಂಗಳೂರಿನವರ ಆಡುಮಾತು, ಉಡುಪಿಯ ಮಾತುಗಾರಿಕೆ, ಕುಂದಾಪುರದ ರಾಗದ ಒಕ್ಕಣೆ ಇವೆಲ್ಲ ಭಾಷೆಯ ಸೊಗಡಿಗೆ ಮೆರುಗು ನೀಡುತ್ತದೆ. ಆಯಾಯ ಪ್ರಾಂತ್ಯದ ಶಬ್ದ ಭಂಡಾರ ವಿಶೇಷತೆಯೂ ಇದೆ. ಇವಲ್ಲದೆ ವೃತ್ತಿ ವಿಶೇಷವಾದ ಪದಗಳು ಬಳಕೆಯಲ್ಲಿವೆ. ಇವು ಭಾಷಾ ಅಧ್ಯಯನಕ್ಕೆ ಯೋಗ್ಯವಾದವುಗಳು ಮತ್ತು ಇವುಗಳನ್ನು ಕಲೆಹಾಕಿ ವಿಶೇಷ ಶಬ್ದ ಭಂಡಾರವನ್ನು ತಯಾರಿಸುವ ಕೆಲಸ ಆಗಬೇಕಾಗಿದೆ. ಭಾಷೆಗಳ ಮಧ್ಯೆ ಕೊಡುಕೊಳ್ಳುವಿಕೆಯ ನೆಲೆಯಲ್ಲಿ, ಚಲನಶೀಲ ಗುಣವುಳ್ಳ ಶಕ್ತಿಶಾಲಿ ಭಾಷೆಯಾಗಿಯೂ ಬ್ಯಾರಿ ಭಾಷೆ ಮಹತ್ವ ಪಡೆದಿದೆ. ಬ್ಯಾರಿ ಸಮುದಾಯದಂತೆಯೇ ಬ್ಯಾರಿ ಭಾಷೆ ಕೂಡಾ ಪರಿಸರದ ಕನ್ನಡ, ತುಳು, ಕೊಂಕಣಿ, ಉರ್ದು, ಮಲಯಾಳ ಭಾಷೆಗಳೊಂದಿಗೆ ನಿಕಟ ಸಂಬಂಧವನ್ನಿಟ್ಟುಕೊಂಡಿದೆ. ಕನ್ನಡ ಲಿಪಿಯನ್ನು ತನ್ನದಾಗಿಸಿಕೊಂಡು ಸಾಹಿತ್ಯ ಕೃತಿಗಳ ರಚನೆಯಲ್ಲಿ ತೊಡಗಿಸಿಕೊಂಡಿದೆ. ಬ್ಯಾರಿ ಸಾಹಿತಿಗಳು ಮೊತ್ತ ಮೊದಲಿಗೆ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಮ್ ಜಗತ್ತನ್ನು ಪರಿಚಯಿಸಿದ ಹೆಗ್ಗಳಿಕೆಯನ್ನು ಪಡೆದವರು. ಇಂದು ಕನ್ನಡದ ಮುಸ್ಲಿಮ್ ಸಮಾಜದಿಂದ ಬಂದ ಲೇಖಕರ ಪೈಕಿ ಬಹು ಸಂಖ್ಯೆಯಲ್ಲಿ ಮತ್ತು ಮುಂಚೂಣಿಯಲ್ಲಿದ್ದಾರೆ. ಹೊಸ ಲೇಖಕರು ಬಹುಸಂಖ್ಯೆಯಲ್ಲಿ ಕನ್ನಡದಲ್ಲಿ ಬರೆಯುತ್ತಿದ್ದಾರೆ. ಬ್ಯಾರಿ ಸಮಾಜದಿಂದ ಬಂದ ಬರಹಗಾರರು ಬ್ಯಾರಿ ಭಾಷೆಯಲ್ಲೂ, ಕನ್ನಡದಲ್ಲೂ ಏಕಕಾಲಕ್ಕೆ ಬರೆಯುತ್ತಿದ್ದಾರೆನ್ನುವುದು ಮಹತ್ವದ ಸಂಗತಿಯಾಗಿದೆ. ಆದರೆ ಬ್ಯಾರಿ ಭಾಷೆಯ ಕೃತಿಗಳಿಗೆ ಪ್ರೋತ್ಸಾಹ ಸಾಲದು, ಹೆಚ್ಚು ಹೆಚ್ಚು ಕೃತಿಗಳು ಅಚ್ಚಾಗುವಂತಹ ಪರಿಸರ ನಿರ್ಮಾಣವಾಗಬೇಕಾಗಿದೆ. ಕೃತಿಗಳನ್ನು ಕೊಂಡು ಓದುವ ಹವ್ಯಾಸ ಇನ್ನಷ್ಟು ಬೆಳೆಯಬೇಕಾದ ಅವಶ್ಯಕತೆ ಇದೆ. ಬ್ಯಾರಿ ಭಾಷಾ ಪತ್ರಿಕೆಗಳಿಗೂ ಈ ಮಾತು ಅನ್ವಯಿಸುತ್ತದೆ. 'ಬ್ಯಾರಿ ವಾರ್ತೆ'ಯಂತಹ ಪತ್ರಿಕೆಗಳು ನಿಂತು ಹೋಗಿರುವುದು ವಿಷಾದನೀಯ. ಬ್ಯಾರಿ ಭಾಷಿಕರಿಗೆ ಇಂತಹ ಪತ್ರಿಕೆಗಳನ್ನು ಉಳಿಸಿಕೊಂಡು ಬೆಳೆಸುವ ಜವಾಬ್ದಾರಿ ಇದೆ ಎನ್ನುವುದನ್ನು ಈ ಮೂಲಕ ಎಚ್ಚರಿಸಲು ಬಯಸುತ್ತೇನೆ.

**ಬ್ಯಾರಿ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು :**

ಬ್ಯಾರಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಹಲವಾರು ಇವೆ. ಇಂದು ಇದು ಒಂದು ಹಿಂದುಳಿದ ಜನಾಂಗವೆಂದು ಪರಿಗಣಿಸಲ್ಪಟ್ಟಿದೆ. ಇದು ಒಂದು ಒಳ್ಳೆಯ ಸಂಕೇತವೆಂದು ನನಗನ್ನಿಸುವುದಿಲ್ಲ. ಇದೊಂದು ಎಚ್ಚರಿಕೆಯ ಗಂಟೆ ಎಂದು ಪರಿಗಣಿಸಬೇಕು. ಒಂದು ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಮುದಾಯ, ಬ್ಯಾರಿ ಎಂದರೆ ಹೆಗ್ಗಳಿಕೆಯ ಕುರುಹಾಗಿದ್ದದ್ದು ಇಂದು ಕೀಳರಿಮೆಯ ಪದವಾಗಿ, ಹಿಂದುಳಿದ ಸಮಾಜವಾಗಿ ಯಾಕೆ ಬದಲಾಯಿತು? ಇದಕ್ಕೆ ಕಾರಣವೇನು? ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಸಮಾಜ ಎದುರಿಸುತ್ತಿರುವ ಕೆಲವೊಂದು ಸಮಸ್ಯೆಗಳ ಬಗ್ಗೆ ನಿಮ್ಮ ಗಮನ ಹರಿಸಲು ಈ ಮೂಳ್ಕ ಪ್ರಯತ್ನಿಸುತ್ತೇನೆ.

**ಶಿಕ್ಷಣದ ಕೊರತೆ - ಕಂದಾಚಾರ, ಮೂಢ ನಂಬಿಕೆಗಳು :**

ಧಾರ್ಮಿಕ ವಿದ್ಯಾಭ್ಯಾಸದ ಜೊತೆಗೆ ಆಧುನಿಕ ವಿದ್ಯಾಭ್ಯಾಸದ ಅಗತ್ಯದ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಇತರ ಸಮುದಾಯದವರಿಗೆ ಹೋಲಿಸಿದರೆ ಬ್ಯಾರಿ ಸಮುದಾಯ ಆಧುನಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವವನ್ನು ನೀಡಿಲ್ಲವೆನ್ನುವುದು ಕಂಡು ಬರುತ್ತದೆ. ಮಂಗಳೂರು ಬಿಟ್ಟರೆ ಬ್ಯಾರಿಗಳ ಶಿಕ್ಷಣ ಸಂಸ್ಥೆಗಳು ಬೇರೆಲ್ಲೂ ಕಂಡು ಬರುವುದಿಲ್ಲ. ದೇಶ ಪ್ರೇಮದ ಕೆಚ್ಚಿನಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ ಬ್ರಿಟೀಷರ ಪರವಾದದ್ದೆಂದು ತಿರಸ್ಕರಿಸಿದ ಬ್ಯಾರಿಗಳು ಮಕ್ಕಳನ್ನು ಶಾಲೆಗೆ ಸೇರಿಸಲು ಅಸಡ್ಡೆ ತೋರಿಸಿದರು. ಮುಂದೆ ಬಡತನ, ಹೆತ್ತವರು ಅಶಿಕ್ಷಿತರಾಗಿರುವುದು, ಮುಂತಾದ ಕಾರಣದಿಂದಾಗಿ ಬ್ಯಾರಿ ಮಕ್ಕಳು ಪ್ರಾಥಮಿಕ ಹಂತದಲ್ಲೇ ಶಾಲೆ ನಿಲ್ಲಿಸಿ, ಹಣ ಸಂಪಾದನೆಯ ದಾರಿಯನ್ನು ಕಂಡುಕೊಳ್ಳುವುದು ಹೆಚ್ಚಾಗಿ ಕಂಡು ಬರುತ್ತದೆ. ಇಂದು ಈ ಪರಿಸ್ಥಿತಿ ಸುಧಾರಿಸಿದ್ದರೂ ಹೆಚ್ಚು ಕಮ್ಮಿ 4%ದಷ್ಟು ಮಕ್ಕಳು ಮಾತ್ರ ಪದವಿ ಕಾಲೇಜುಗಳಲ್ಲಿ ದಾಖಲಾಗುತ್ತಿರುವುದು ಕಾಣಬಹುದು. ಸಮುದಾಯದಲ್ಲಿ ಇರುವ ಅಂಧವಿಶ್ವಾಸ, ಮೌಢ್ಯ ತೊಲಗಬೇಕಿದ್ದರೆ ಶಿಕ್ಷಣ ತೀರಾ ಅಗತ್ಯವಾಗಿದೆ.

**ಆರ್ಥಿಕ ಸಮಸ್ಯೆ :**

ನಮ್ಮ ಶಿಕ್ಷಿತ ಯುವಕರಿಗೆ ಕೂಡ ಸರಿಯಾದ ನೌಕರಿ ಸಿಗದೆ, ಮಾಹಿತಿಯೂ ದೊರೆಯದೆ ನಿರುದ್ಯೋಗಿಗಳಾಗಿ ಮಾನವಶಕ್ತಿ ನಷ್ಟವಾಗುತ್ತಿರುವುದು ಬಹುದೊಡ್ಡ ಸಮಸ್ಯೆ. ಸರಕಾರಿ ಉದ್ಯೋಗವಂತೂ ದೂರದ ಮಾತು. ಖಾಸಗಿ ವಲಯದಲ್ಲೂ ಕೂಡಾ ಸಣ್ಣಪುಟ್ಟ ಕೆಲಸಗಳಿಗೂ ಪೈಪೋಟಿಯಿಂದಾಗಿ ಯುವಕರು ಒಂದೋ ಸಣ್ಣ ಪುಟ್ಟ ವ್ಯಾಪಾರಸ್ಥರಾಗಿ, ಕೂಲಿ ಕೆಲಸಗಾರರಾಗಿ, ಇಲ್ಲವೇ ಪರದೇಶದಲ್ಲಿ

ಕೆಲಸ ಅರಸುವುದರಲ್ಲಿ ಸಮಯ ಕಳೆಯುತ್ತಾರೆ. ಬ್ಯಾರಿ ಸಮುದಾಯದ 70% ದಷ್ಟು ಜನ ಬಡತನ ರೇಖೆಗಿಂತ ಕೆಳಗೆ ಇರುವುದು ಒಂದು ಆತಂಕಕಾರಿ ಸಂಗತಿ. ಸರಕಾರ ನೀಡುವ ಚಿಕ್ಕಪುಟ್ಟ ಸವಲತ್ತುಗಳ ಮಾಹಿತಿಯೂ ಇಲ್ಲದೆ ಈ ಜನಗಳು ವಂಚಿತರಾಗಿದ್ದಾರೆ. ಮುಸ್ಲಿಮರ ಚಿಂತಾಜನಕ ಆರ್ಥಿಕ ಪರಿಸ್ಥಿತಿಯ ನಡುವೆ ಕೋಮುಗಲಭೆಗಳಲ್ಲಿ ಉಂಟಾಗುವ ಆರ್ಥಿಕ ನಷ್ಟದ ಆಘಾತ, ಇದರಿಂದಾಗಿ ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ ಇವರಲ್ಲಿ ಒಂದು ರೀತಿಯಲ್ಲಿ ಅಸಡ್ಡೆಯೇ ತುಂಬಿಕೊಂಡಿದೆ. ರಾಜಕೀಯ ನೇತಾರರು ತೋರಿಸುವ ಕನಸುಗಳಿಗೆ ಕ್ಷಣದ ಉತ್ಸಾಹ ತೋರಿದರೂ, ಅಲ್ಪ ಸಮಯದಲ್ಲಿ ಇವರಿಗೆ ಭ್ರಮನಿರಸನವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಕ್ಷೀಣವಾಗುತ್ತಿರುವ ಇವರಲ್ಲಿ ಜಾಗೃತಿ ಮೂಡಿಸಬೇಕಾದ ಅವಶ್ಯಕತೆ ಇದೆ. ಬ್ಯಾರಿಗಳ ಆರ್ಥಿಕ ಸಮಸ್ಯೆಗಳು ಈ ದೇಶದ ಒಟ್ಟು ಸಮಸ್ಯೆಯ ಭಾಗವಾಗಿದೆಯಾದರೂ, ಮುಸ್ಲಿಮರ ಸಮಸ್ಯೆಗಳ ಸುಧಾರಣೆಯ ಪ್ರಸ್ತಾಪ ಬಂದಾಗಲೆಲ್ಲ ತುಷ್ಟೀಕರಣವೆಂದೋ, ಇನ್ನೊಂದೋ ಕಾರಣವೆತ್ತಿ ಪ್ರತಿಭಟನೆಯಾಗಿ, ಸರಕಾರದ ಪ್ರಯತ್ನವನ್ನು ಕಾಮಾಲೆ ಕಣ್ಣಿಂದ ನೋಡಲಾಗಿ, ಈ ಜನರನ್ನು ಪ್ರಗತಿಯಿಂದ ದೂರವಿಡುವ ಹುನ್ನಾರ ವ್ಯವಸ್ಥಿತವಾಗಿ ನಡೆಯುತ್ತಲೇ ಇದೆ. ದೇಶದ ಒಟ್ಟು ಜನ ಸಂಖ್ಯೆಯ 15% ರಷ್ಟಿರುವ ಮುಸ್ಲಿಮರನ್ನು ಕಡೆಗಣಿಸಿ ದೇಶದ ಅಭಿವೃದ್ಧಿ ಸಾಧಿಸುತ್ತೇವೆಂದುಕೊಂಡರೆ ಅದು ಬರೀ ಭ್ರಮೆ ಅಷ್ಟೆ. ಬ್ಯಾರಿ ಸಮುದಾಯದವರು ತಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ, ನಿರುದ್ಯೋಗ ನಿವಾರಣೆಗಾಗಿ, ಸರಕಾರದ ಮುಂದೆ ಪ್ರಜಾಸತ್ತಾತ್ಮಕವಾದ ಹಕ್ಕುಗಳ ಒತ್ತಾಯದ ಬೇಡಿಕೆ ಮುಂದಿಡಬೇಕು. ಈ ನಿಟ್ಟಿನಲ್ಲಿ ಶಾಂತಿಯುತವಾದ ಹೋರಾಟವೊಂದೇ ದಾರಿಯಾಗಿದೆ. ಇಲ್ಲವಾದಲ್ಲಿ ನಮ್ಮ ಜನರ ಸುಧಾರಣೆ ತುಂಬ ದೂರದ ಮಾತು.

**ಮಹಿಳಾ ಸಮಸ್ಯೆ :**

ಒಟ್ಟು ಸಮುದಾಯದ ಜನ ಸಂಖ್ಯೆಯ ಅರ್ಧ ಪಾಲಿನಷ್ಟು ಇರುವ ಮಹಿಳೆಯರ ಸಮಸ್ಯೆಗಳ ಬಗ್ಗೆ ಗಮನ ಕೊಡುವುದು ಅತ್ಯಂತ ಅಗತ್ಯವಾದದ್ದು. ಮಹಿಳೆಯರ ವಿದ್ಯಾಭ್ಯಾಸದ ಹಕ್ಕನ್ನು ಕಡೆಗಣಿಸುವುದರಿಂದ ಸಮುದಾಯಕ್ಕೆ ಆಗುವ ದೊಡ್ಡ ನಷ್ಟ ಎನ್ನುವುದನ್ನು ಮನಗಾಣಬೇಕು. ಗಂಡು ಮಗ ಸುಶಿಕ್ಷಿತನಾದರೆ ವೈಯಕ್ತಿಕವಾಗಿ ಮಾತ್ರ ಸುಧಾರಿಸಿಕೊಳ್ಳುತ್ತಾನೆ. ಆದರೆ, ಹೆಣ್ಣು ಸುಶಿಕ್ಷಿತಳಾದರೆ ಇಡೀ ಕುಟುಂಬವೇ ಅದರ ಫಲ ಅನುಭವಿಸುತ್ತದೆನ್ನುವ ಮಾತು ಸತ್ಯ. ಇಂದಿನ ಯುಗದಲ್ಲಿ ಮಹಿಳೆಯರ ಶಿಕ್ಷಣ, ಆರ್ಥಿಕ ಸ್ವಾತಂತ್ರ್ಯ ಅತ್ಯಂತ ಅವಶ್ಯಕವಾದದ್ದು ಮತ್ತು ಅನೇಕ ಸಾಮಾಜಿಕ ಸಮಸ್ಯೆಗಳ ನಿವಾರಣೆಯ ಹಾದಿಯೂ ಕೂಡಾ ಆಗಿದೆ. ಇದು ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆಯ ಪಿಡುಗು ನಿವಾರಣೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಎಂದು ಪರಿಗಣಿಸಬೇಕಾಗಿದೆ.

**ಕೋಮುಗಲಭೆಗಳು :**

ದಕ್ಷಿಣ ಕನ್ನಡದಲ್ಲಿ ಪದೇ ಪದೇ ನಡೆಯುತ್ತಿರುವ ಕೋಮು ಗಲಭೆಗಳಿಂದ ಅತ್ಯಂತ ಜೀವಹಾನಿ, ಆರ್ಥಿಕ ನಷ್ಟಗಳಿಗೆ ಬ್ಯಾರಿ ಸಮುದಾಯದ ಜನರು ತುತ್ತಾಗುತ್ತಿದ್ದಾರೆ. ಯಾವುದೋ ಒಂದು ಸಂಬಂಧವಿಲ್ಲದ ಕ್ಷುಲ್ಲಕ ಕಾರಣ, ಒಂದು ಗಾಳಿ ಸುದ್ದಿ ಕೂಡ ದೊಡ್ಡದೊಂದು ಕೋಮು ಗಲಭೆಗೆ ಕಾರಣವಾಗುತ್ತದೆ. ಸ್ವಯಂಘೋಷಿತ ಸಾಮಾಜಿಕ ರಕ್ಷಕರು ಕಾನೂನನ್ನು ಕೈಗೆತ್ತಿಕೊಂಡು ಗೂಂಡಾಗಿರಿ ನಡೆಸುವಾಗ ಕಾನೂನಿನ ರಕ್ಷಕರು ಕೈಕಟ್ಟಿ ಕೂತು ನೋಡುತ್ತಿರುವುದು, ಇದು ಅನೇಕ ವರ್ಷಗಳಿಂದ ಪುನರಾವರ್ತನೆಯಾಗುತ್ತಿರುವುದು ದಕ್ಷಿಣ ಕನ್ನಡದಲ್ಲಿ ಸಾಮಾನ್ಯ ಸಂಗತಿ. ಇಲ್ಲಿ ಬಲಿಯಾಗುವ ಅಮಾಯಕರಿಗೆ ಯಾವ ರಕ್ಷಣೆಯೂ ಇರುವುದಿಲ್ಲ. ಕೋಮು ಸೌಹಾರ್ದತೆಯ ಕೇಂದ್ರಗಳಲ್ಲೂ ಕೋಮುವಾದದ ವಿಷಗಾಳಿ ತುಂಬಿಸಲಾಗಿ ಉಸಿರುಕಟ್ಟುವ ವಾತಾವರಣ ಸೃಷ್ಟಿಯಾಗಿರುವುದು ಬಹುದೊಡ್ಡ ದುರಂತ. ಇದರ ಹಿಂದೆ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಹುನ್ನಾರ ಅತ್ಯಂತ ಅಪಾಯಕಾರಿ. ಇದರಿಂದಾಗಿ ಬ್ಯಾರಿ ಸಮುದಾಯದ ಸಾಮಾನ್ಯರು ಭಯ, ಅತಂತ್ರತೆ, ಅನಾಥ ಪ್ರಜ್ಞೆಯಿಂದ ಬಳಲುತ್ತಿದ್ದಾರೆ. ಕೋಮು ದಳ್ಳುರಿಗೆ ಅಮಾಯಕರು ಬಲಿಯಾಗುವುದಕ್ಕೆ ಮುಖ್ಯವಾಗಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಮುಖ್ಯ ಕಾರಣವಾಗಿದೆ.

ಇತ್ತೀಚೆಗೆ ಭಾರತವೂ ಸೇರಿದಂತೆ ವಿಶ್ವದಾದ್ಯಂತ ಬೆಳೆಯುತ್ತಿರುವ ಭಯೋತ್ಪಾದನೆ ಎಲ್ಲರನ್ನೂ ಭೀಕರವಾಗಿ ಕಾಡುತ್ತಿದೆ. ಇದಕ್ಕೆ "ಇಸ್ಲಾಮಿಕ್ ಟೆರರಿಸಂ" ಎಂಬ ಹೆಸರಿಟ್ಟು ಅಮೇರಿಕಾ, ವಿಶ್ವದ ಮುಸ್ಲಿಮ್ ಜನ ಸಮುದಾಯವನ್ನು ಅಪರಾಧಿ ಸ್ಥಾನದಲ್ಲಿಡುವ ಹುನ್ನಾರ ನಡೆಸುತ್ತಿದೆ. ಇದು ಸಾಲದೆಂಬಂತೆ ಭಾರತದ ಕೋಮುವಾದಿ ಭಯೋತ್ಪಾದಕರು "ಎಲ್ಲ ಮುಸ್ಲಿಮರು ಟೆರರಿಸ್ಟರಲ್ಲ, ಆದರೆ ಎಲ್ಲಾ ಟೆರರಿಸ್ಟರೂ ಮುಸ್ಲಿಮರು" ಎಂಬ ಜಾಣತನದ ಸುಲಭ ಸಮೀಕರಣದ ಕುತಂತ್ರದ ಮೂಲಕ ಅಮಾಯಕ ಮುಸ್ಲಿಮರ ಮೇಲೆ ಅಪರಾಧದ ಹೊರೆ ಹೊರಿಸುವ ಪ್ರಯತ್ನ ಮಾಡುತ್ತಾರೆ. ತಮ್ಮ ಸಮಾಜದ ಯಾರೋ ಒಬ್ಬ ಮಾಡುವ ಅಪರಾಧಕ್ಕೆ ಇಡೀ ಮುಸ್ಲಿಮ್ ಸಮುದಾಯವನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಹುನ್ನಾರವಿದು. ಭಯೋತ್ಪಾದನೆ ಅಮಾನವೀಯವಾದದ್ದು, ಮಾನವ ವಿರೋಧಿಯಾದದ್ದು. ಇದನ್ನು ಇಸ್ಲಾಮ್ ಧರ್ಮವಾಗಲೀ, ಮುಸ್ಲಿಮರಾಗಲೀ ಸರ್ವಥಾ ಒಪ್ಪಲಾರರು. ಇಸ್ಲಾಮ್ ಧರ್ಮ ಇಂತಹ ಆತಂಕವಾದವನ್ನು ಖಂಡಿಸುತ್ತದೆ. ಹೀಗಿದ್ದರೂ ಇಸ್ಲಾಮ್ ಧರ್ಮದ ವಿರುದ್ಧ ಈ ರೀತಿಯ ಪಿತೂರಿ ಯಾಕೆ ನಡೆಯುತ್ತಿದೆ? ಹಾಗಂತ ವಿಶ್ವದಲ್ಲಿ ಇತರ ಧರ್ಮಕ್ಕೆ ಸಂಬಂಧಿಸಿದ ಭಯೋತ್ಪಾದಕರಿಗೆ ಕೊರತೆ ಇಲ್ಲ. ಬ್ರಿಟನ್ನಿನ ಐ.ಆರ್.ಎ, ಇಸ್ರೇಲ್, ಆಫ್ರಿಕಾದ ಭಯೋತ್ಪಾದಕ ಸಂಘಟನೆಗಳು, ಅಮೇರಿಕಾದ ವರ್ಣದ್ವೇಷಿ ಭಯೋತ್ಪಾದಕರಾದ ಕುಕ್ಲುಕ್ಷ್ ಕ್ಲಾನ್, ಭಾರತದಲ್ಲಿ ಶಿವಸೇನೆ, ಸಂಘಪರಿವಾರ, ರಣಬೀರ್ ಸೇನೆ, ನಾಗ, ಉಲ್ಫಾ ಇವೆಲ್ಲವೂ ಧರ್ಮದ ಹೆಸರಿನಲ್ಲಿ ಅಮಾಯಕರ ಕಗ್ಗೊಲೆಗಳನ್ನು ನಡೆಸುತ್ತಲೇ ಬಂದಿವೆಯಾದರೂ, ಈ ಭಯೋತ್ಪಾದಕರನ್ನು ಧರ್ಮದ ಹೆಸರಿನ ಹಿನ್ನಲೆಯಲ್ಲಿ ಯಾಕೆ ಕರೆಯುತ್ತಿಲ್ಲ? ಹೀಗಿದ್ದರೂ ಭಯೋತ್ಪಾದನೆಗೆ ಮತ್ತು ಧರ್ಮಕ್ಕೆ ಯಾವ ಸಂಬಂಧವೂ ಇಲ್ಲ. ಭಯೋತ್ಪಾದನೆ ಮಾನವ ವಿರೋಧಿಯಾಗಿದ್ದು ಇದನ್ನು ನಾವೆಲ್ಲರೂ ಖಂಡಿಸುತ್ತೇವೆ ಎನ್ನುವ ತೀರ್ಮಾನವನ್ನು ನಾವು ಇಂದು ತೆಗೆದುಕೊಳ್ಳಬೇಕಾಗಿದೆ.

ಬ್ಯಾರಿ ಸಂಸ್ಕೃತಿಯ ರಕ್ಷಣೆಗಾಗಿ ಕೈಗೊಳ್ಳಬೇಕಾದ ಕ್ರಮಗಳು

**1. ಬ್ಯಾರಿ ಅಕಾಡೆಮಿ ಸ್ಥಾಪನೆಗಾಗಿ ಒತ್ತಾಯ:** 1,400 ವರ್ಷಗಳ ಇತಿಹಾಸ ಮತ್ತು ಹನ್ನೆರಡು ಲಕ್ಷದಷ್ಟು ಸಂಖ್ಯೆಯಲ್ಲಿರುವ ಕರ್ನಾಟಕದ ಬ್ಯಾರಿ ಸಮುದಾಯದ ಭಾಷೆಯ ಉಳಿತಿಗಾಗಿ ಮತ್ತು ಈ ಭಾಷೆಯ ಸಾಹಿತ್ಯಿಕ ಬೆಳವಣಿಗೆಗಾಗಿ ಬ್ಯಾರಿ ಸಾಹಿತ್ಯ ಅಕಾಡಮಿಯ ಸ್ಥಾಪನೆ ಅಗತ್ಯವಾಗಿ ಆಗಬೇಕಾಗಿದೆ. ಇದಕ್ಕಾಗಿ ಈ ಸಮ್ಮೇಳನದಲ್ಲಿ ಸರಕಾರವನ್ನು ಒತ್ತಾಯಿಸಬೇಕಾಗಿದೆ. ಸರಕಾರಕ್ಕೆ ಹಲವಾರು ಸಲ ವಿನಂತಿಮಾಡಿಕೊಂಡರೂ ಕೂಡಾ ಕಾರ್ಯಗತಗೊಳಿಸದೆ ಇರುವುದರಿಂದ, ಸಮಯಾವಕಾಶದ ಗಡಿ ನಿಗದಿ ಪಡಿಸಬೇಕಾಗಿದೆ. ಇದಕ್ಕೆ ತಪ್ಪಿದಲ್ಲಿ ಬ್ಯಾರಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿ ಸರಕಾರವನ್ನು ಎಚ್ಚರಿಸಲಿದ್ದಾರೆಂಬ ಸಂದೇಶವನ್ನು ಈ ಸಮ್ಮೇಳನದಲ್ಲಿ ನೀಡಬೇಕಾಗಿದೆ.

**2. ಬ್ಯಾರಿ ಸಂಸ್ಕೃತಿಯ ಅಧ್ಯಯನಕ್ಕಾಗಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪೀಠ ಸ್ಥಾಪನೆ :** ಬ್ಯಾರಿ ಸಂಸ್ಕೃತಿಯ ಅನೇಕ ಭಾಗಗಳು ಕಾಲದ ಹೊಡೆತಕ್ಕೆ ಸಿಕ್ಕಿ ಮಾಯವಾಗಿದೆ. ಬ್ಯಾರಿ ಕಲೆಗಳು ಕೋಲ್ ಕಲಿ, ತಾಲೀಮು ಮುಂತಾದವು, ಆಟಗಳು, ಕರಕುಶಲ ವಸ್ತುಗಳು ಇಂದು ಕಾಣ ಸಿಗುವುದಿಲ್ಲ. ಬಾಯ್ದೆರೆಯಲ್ಲಿರುವ ಜನಪದ ಸಾಹಿತ್ಯ ಸಂಪತ್ತನ್ನು ಒಂದೆಡೆ ಕಲೆಹಾಕುವ ಪ್ರಯತ್ನ ಮಾಡದಿದ್ದರೆ ಸಂಪೂರ್ಣವಾಗಿ ನಶಿಸಿಹೋಗುವ ಅಪಾಯವಿದೆ. ಬ್ಯಾರಿ ಭಾಷಾ ವ್ಯಾಕರಣ, ವೈವಿಧ್ಯಮಯ ಸ್ವರೂಪದ ಅಧ್ಯಯನ, ಶಬ್ದಗಳ ಪರಿಶೋಧನೆ, ಸಂಶೋಧನೆ ನಡೆಯಬೇಕಾಗಿದೆ. ಈ ಉದ್ದೇಶಕ್ಕಾಗಿ ಮಂಗಳೂರು ವಿಶ್ವ ವಿದ್ಯಾಲಯದಲ್ಲಿ ಬ್ಯಾರಿ ಸಂಸ್ಕೃತಿ ಅಧ್ಯಯನ ಪೀಠ ಸ್ಥಾಪನೆಗೆ ಪ್ರಯತ್ನ ನಡೆಸಬೇಕಾಗಿದೆ.

**3. ಸಾಚಾರ್ ಕಮಿಟಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕೆಂದು ಸರಕಾರಕ್ಕೆ ಒತ್ತಾಯ:** ಭಾರತ ಸ್ವಾತಂತ್ರ್ಯ ಪಡೆದು 60 ವರ್ಷ ಕಳೆದರೂ ಮುಸ್ಲಿಮ್ ಸಮುದಾಯದ ಸ್ಥಿತಿಗತಿ ಸುಧಾರಣೆಯಾಗಿಲ್ಲ. 1935 ರಲ್ಲಿ ಬ್ರಿಟೀಷ್ ಸರಕಾರ ರಚಿಸಿದ ಕಮಿಟಿಯಿಂದ ಹಿಡಿದು, 1983ರಲ್ಲಿ ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ನೇಮಕ ಮಾಡಲಾದ ಡಾ| ಗೋಪಾಲ್ ಸಿಂಗ್ ಕಮಿಟಿ ಸೇರಿದಂತೆ ಅನೇಕ ಸಲ ಸರಕಾರ ಮುಸ್ಲಿಮರ ಸ್ಥಿತಿಗತಿ ಅಧ್ಯಯನಕ್ಕಾಗಿ ಕಮಿಟಿ ನೇಮಕ ಮಾಡಿ ವರದಿಗಳು ಸಲ್ಲಿಸಿದರೂ ಶಿಫಾರಸ್ಸುಗಳನ್ನು ಜಾರಿಗೆ ತರುವ ಧೈರ್ಯ ಸರಕಾರಗಳು ಮಾಡಿಲ್ಲ. ಈಗ ಮತ್ತೊಂದು ಕಮಿಟಿ ನೇಮಕಗೊಂಡು, 2006ರ ನವೆಂಬರ್ ತಿಂಗಳಲ್ಲಿ ಜಸ್ಟಿಸ್ ರಾಜಿಂದರ್ ಸಾಚಾರ್ ಕಮಿಟಿ ತನ್ನ ವರದಿಯನ್ನು ಸರಕಾರದ ಮುಂದೆ ಇಟ್ಟಿದೆ. ಮುಸ್ಲಿಮರ ಈಗಿನ ಪರಿಸ್ಥಿತಿಯ ಸುಧಾರಣೆಗಾಗಿ ಈ ಕಮಿಟಿ ಅನೇಕ ಶಿಫಾರಸ್ಸುಗಳನ್ನು ಸರಕಾರದ ಮುಂದಿಟ್ಟಿದೆ. ಇವುಗಳನ್ನು ಜಾರಿಗೊಳಿಸಬೇಕೆಂದು ಸಮ್ಮೇಳನ ಒತ್ತಾಯಿಸಬೇಕಾಗಿದೆ.

**4. ಕೋಮುಗಲಭೆಯನ್ನು ಸಕಾಲದಲ್ಲಿ ಹತ್ತಿಕ್ಕಬೇಕು ಮತ್ತು ಗಲಭೆ ಪೀಡಿತರಿಗೆ ಸಕಾಲದಲ್ಲಿ ಪರಿಹಾರ ನೀಡಬೇಕು:** ಗಲಭೆ ನಡೆಯುವ ಮುಂಚೆಯೇ ಸರಕಾರಕ್ಕೆ ಗುಪ್ತಚರ ವಿಭಾಗದಿಂದ ಪ್ರತೀ ಸಾರಿಯೂ ವರದಿ ಸಲ್ಲಿಸಲಾಗುತ್ತಿದೆಯಾದರೂ ಸರಕಾರ ಗಲಭೆಯನ್ನು ಹತ್ತಿಕ್ಕುವಲ್ಲಿ ವಿಫಲಗೊಳ್ಳುವುದು ವಿಷಾದಕರ. ಸರಕಾರ ಇನ್ನು ಮುಂದಾದರೂ ಸಕಾಲದಲ್ಲಿ ಕಾರ್ಯೋನ್ಮುಖವಾಗಿ ಗಲಭೆಯನ್ನು ಹತ್ತಿಕ್ಕುವ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಇಲ್ಲವಾದಲ್ಲಿ ಗಲಭೆಯ ನೈತಿಕ ಜವಾಬ್ದಾರಿಯನ್ನು ಸರಕಾರವೇ ಹೊರಬೇಕು. ಗಲಭೆ ಪೀಡಿತರಿಗೆ ಸಕಾಲದಲ್ಲಿ ಸರಕಾರ ನೆರವು ನೀಡಬೇಕು. ಅದಕ್ಕಾಗಿ ಅಮಾಯಕರು ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಕ್ರಮಕೈಗೊಳ್ಳುವ ಅಗತ್ಯವಿದೆ.

**5. ಮಂಗಳೂರಿನಲ್ಲಿ ಒಂದು ಸೌಹಾರ್ದ ಕೇಂದ್ರ ಸ್ಥಾಪನೆಯಾಗುವ ಅಗತ್ಯ:** ಜನ ಸಾಮಾನ್ಯರು ಯಾವುದೇ ಕೋಮಿಗೆ ಸೇರಿದವರಾಗಿದ್ದರೂ ಸೌಹಾರ್ದತೆಯಲ್ಲಿ ನಂಬಿಕೆ ಇಟ್ಟುಕೊಂಡಿರುತ್ತಾರೆ. ಗಲಭೆಯಲ್ಲಿ ರಾಜಕೀಯ ಲಾಭ ಪಡೆಯಲಿಚ್ಛಿಸುವವರು ಅದು ಕ್ಷಣಿಕವಾದದ್ದೆಂದು ತಿಳಿಯಬೇಕು. ಸೌಹಾರ್ದ, ಏಕತೆ, ಮಾನವೀಯತೆ ಶಾಶ್ವತವಾದದ್ದು. ಈ ಹಿನ್ನಲೆಯನ್ನು ಪರಿಗಣಿಸಿ ಎಲ್ಲ ಸೌಹಾರ್ದತೆಯಲ್ಲಿ ವಿಶ್ವಾಸ ಇಟ್ಟವರು ಸೇರುವ ಸ್ಥಳವಾಗಿ ಮಂಗಳೂರಿನಲ್ಲಿ ಒಂದು ಸೌಹಾರ್ದ ಕೇಂದ್ರ ಸ್ಥಾಪನೆಯಾಗಬೇಕೆಂದು ಸರಕಾರವನ್ನು ಒತ್ತಾಯಿಸುವ ಅಗತ್ಯವಿದೆ.

**ಕೊನೆಯ ಮಾತು :** ಬ್ಯಾರಿ ಸಮುದಾಯ ನಡೆದು ಬಂದ ದಾರಿ ಹೂ ಹಾಸಿಗೆಯ ಮೇಲೇನಲ್ಲ. ಮುಳ್ಳು, ಹೊಂಡ, ಏರು, ತಗ್ಗುಗಳು ತುಂಬಿದ ಹಾದಿಯಾಗಿತ್ತು. ಇಂತಹ ಹಾದಿಯಿಂದ ಸಾಗುತ್ತ 4ನೇ ಸಮ್ಮೇಳನದ ತನಕ ಮುಟ್ಟಿದ್ದೇವೆ. ಇದಕ್ಕೆ ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ ಮತ್ತು ಅದರ ಎಲ್ಲ ಪದಾಧಿಕಾರಿಗಳು, ಮುಖ್ಯವಾಗಿ ಜನಾಬ್ ಎಂ.ಬಿ. ಅಬ್ದುಲ್ ರಹ್ಮಾನ್, ಅವರ ಜೊತೆಗೆ ಅವಿರತವಾಗಿ ದುಡಿಯುತ್ತಿರುವ ಜನಾಬ್ ಯು.ಹೆಚ್. ಉಮರ್ ಮತ್ತು ಇತರರು, ಬ್ಯಾರೀಸ್ ವೆಲ್ಫೇರ್ ಎಸೋಸಿಯೇಶನ್‌ನ ಅಧ್ಯಕ್ಷರಾದ ಜನಾಬ್ ಬಿ.ಎಂ. ಫಾರೂಖ್ ಮತ್ತು ಇತರ ಪದಾಧಿಕಾರಿಗಳು, ಚಿಕ್ಕಮಗಳೂರಲ್ಲಿ ಈ ಸಮ್ಮೇಳನವನ್ನು ನಡೆಸುವುದಕ್ಕಾಗಿ ಅವರಿತ ಶ್ರಮ ಪಟ್ಟು, ನನ್ನ ಮೇಲೆ ಪ್ರೀತಿ ವಿಶ್ವಾಸವಿಟ್ಟು ಈ ಸ್ಥಾನದಲ್ಲಿ ಕುಳ್ಳಿರಿಸಿದ ಚಿಕ್ಕಮಗಳೂರಿನ ಜಿಲ್ಲಾ ಬ್ಯಾರಿಗಳ ಒಕ್ಕೂಟದ ಅಧ್ಯಕ್ಷರಾದ ಕೆ. ಮುಹಮ್ಮದ್, ಗೌರವಾಧ್ಯಕ್ಷ ಜನಾಬ್ ಬಿ.ಎಸ್. ಖಲಂದರ್, ಕಾರ್ಯದರ್ಶಿ ಜನಾಬ್ ಹೆಚ್. ನೂರ್ ಮಹಮ್ಮದ್ ಮತ್ತು ಎಲ್ಲಾ ಪದಾಧಿಕಾರಿಗಳು, ಸದಸ್ಯರಿಗೆ ನಾನು ಚಿರಋಣಿಯಾಗಿದ್ದೇನೆ. ಇವರಿಗೆ ಇನ್ನೂ ಕೂಡಾ ಬ್ಯಾರಿ ಸಮುದಾಯದ ಸೇವೆ ಮಾಡಲಿಕ್ಕೆ ಅವಕಾಶ ಒದಗಿಬರಲೆಂದು ಅಲ್ಲಾಹನಲ್ಲಿ ಪ್ರಾರ್ಥಿಸುತ್ತ, ಶುಭಾಶಯಗಳನ್ನು ಕೋರುತ್ತಾ ಮಾತನ್ನು ಮುಗಿಸುತ್ತೇನೆ.

**● ಫಕೀರ್ ಮುಹಮ್ಮದ್ ಕಟ್ಪಾಡಿ**

ಜಿಲ್ಲಾ ಒಕ್ಕಲಿಗರ ಸಮುದಾಯ ಭವನ, ಚಿಕ್ಕಮಗಳೂರು

ದಿನಾಂಕ : 27-2-2007

# ನಾಲನೇ ರಾಜ್ಯಮಟ್ಟತ್ತೆ ಬ್ಯಾರಿ ಸಾಹಿತ್ಯ ಸಮ್ಮೇಳನ

**ಚಿಕ್ಕಮಗಳೂರು, 27-2-2007**

## ಅಧ್ಯಕ್ಷರೊ ಭಾಷಣ

ಬ್ಯಾರಿ ಖೌಮುಡೆ ಪಿರ್ಸಪ್ಪೆಟ್ಟೆ ಹಿರಿಯಾಕಮ್ಮಾರೆ, ಚೆರಿಯಾಕಮ್ಮಾರೆ, ಉಮ್ಮ, ಪೆಂಜಮ್ಮಾರೆ, ಎಲ್ಲ ಖೌಮುಡೆ ಚೆಂಜಾಯಿಮ್ಮಾರೆ

ಅಸ್ಸಲಾಮು ಅಲೈಕುಂ

ಏಲ್ ಕಡಲ್ ದಾಂಟಿತ್ ಕಡಪ್ಪುರತ್ತೆ ಮೂಲಕ ಇಸ್ಲಾಮ್ ದೀನ್, ಯಾರಕೊರೊಡಿ ೭ನೇ ಶತಮಾನತ್ತ್ ನೆಬಿ(ಸ.ಅ.)ಡೆ ಜೀವಿತ ಕಾಲತ್ತ್, ಇಡೀ ಭಾರತತ್ತ್‌ಗ್ ಮುನ್ನೊಲು, ಸುರೂಲ್ ಕೇರಳ ಅಜನೆಮೇ ಕರ್ನಾಟಕತ್ತೆ ಕಡಪುರತ್ತೆರ್ಗ್‌ಗ್ ಕಾಲಿಟ್ಟ್‌ಡ್ ಚೆಂತ್ ನಜಲೆ ಪಲೇ ಸಾಹಿತಿಮಾರ್, ಇತಿಹಾಸಕ್ಕಾರ್ ಪಾಡಿ ಕೊಂಡಾಡಿಯೆ ಖೌಮುಡೆ ಭಾಗಮಾಯಿತುಲ್ಲೆ ಬ್ಯಾರಿ ಖೌಮುಗು ಸೇರಿಯಜ ನಜ ಚೆಂತ್ ಸಹಜಮಾಯಿತ್ ನಜೊಗ್ ಹೆಮ್ಮೆ ಉಂಡ್. ೧೪ನೇ ಶತಮಾನತ್ತೆ ಕಾಲತ್ತ್ ವಿಜಯನಗರ ಅರಸಮ್ಮಾರೆ ಒಟ್ಟುಗು ಬ್ಯಾರಿ ಸಮುದಾಯತ್ತೆ ಸಂಘಟನೆ "ಹಂಜುಮನ" ಚೆಲ್ಲ್‌ಡೆ ಪೇರ್‌ಲ್ (ಇದ್ ಇನ್ನತ್ತೆ ಅಂಜುಮನ್ ಅಥವಾ ಜಮಾತ್ ಐತಿಕ್ಕು) ಇಂತ್ ಮಾತ್ರ ಅಲ್ಲ, ಈ ಅರಸಮ್ಮಾರೆ ಪಲೇವಿಧತ್ತೆ ಉಂಬಳಿ, ಕಾಣಿಕೆ ಗೌರವತ್ತ್‌ಗ್ ಪಾತ್ರಮಾಯಿಂತ್. ಬ್ಯಾರಿ ಖೌಮು ಎಲ್ಲ ಸಮುದಾಯತ್ತಜಲೊಟ್ಟುಲ್ ಹೊರುಮತ್ತ್‌ಲ್ ಇಂತ್. ಎಲ್ಲ ಸಮುದಾಯತ್ತಜಲೆ ಗೌರವತ್ತ್‌ಗ್ ಪಾತ್ರಮಾಯೆದ್ ಮಾತ್ರ ಅಲ್ಲ, ಬ್ಯಾರಿ ಚೆಲ್ಲ್‌ಡೆ ಪದತ್‌ಗ್ ಮಸ್ತ್ ಆದರ ಇಂತ್. ತುಳುನಾಡ್‌ಡೆ ಪಲೇ ಅಗಜ ಮಾತ್ರ ಅಲ್ಲ, ಪಲೇ ಕುಟುಮತ್ತೆ ಆಗತ್ತೆ ಮನಿಷಮ್ಮಾರೆ ಪೇರ್ ಬಿಲ್ಚಿತ್ತ್ ಇನ್ನ್‌ಗೂಂ ಪಲೇ ದೇವಸ್ಥಾನಂಜಲ್‌ಲ್ ಉತ್ಸವತ್ತಪ್ಪ ಸಮ್ಮಾನ ಆಕ್‌ಡೆದ್, ವೀಳ್ಯ ಮರ್ಯಾದೆ ಕೊಡುಕ್ಕ್‌ಡೆದ್ ನಡನ್ನೊಂತುಂಡು. ಇದ್‌ಕ್, ಬಾರಕೂರ್‌ಡೆ ನರಸಿಂಹ ದೇವಸ್ಥಾನ, ಉಡುಪಿಡೆ, ಬಸರೂರು, ಬಪ್ಪನಾಡ್‌ಡೆ ಉದಾಹರಣೆ ಎಡ್‌ಕ್ಕ. ದೇವಸ್ಥಾನತ್ತೆ ಬಿಸಯತ್ತ್‌ಲ್ ನಾಟ್‌ಲ್ ಎನಿಚ್ಚೆ ವಿವಾದ, ನ್ಯಾಯ ತೀರ್ಮಾನತ್ತ್‌ಲ್ ಮುಸ್ಲಿಮೀಜ ಸೇರಿತ್ ತೀರ್ಮಾನತ್ತ್ ಪ್ರಮುಖ ಸ್ಥಾನತ್ತ್, ನಿನ್ನೆದ್ ದಾಖಲೆಜ ಉಂಡ್. ಉದಾಹರಣೆಗ್ 'ದಕ್ಷಿಣ ಕನ್ನಡತ್ತೆ ಮುಸ್ಲಿಮೀಜ' ಚೆಲ್ಲ್‌ಡೆ ಜನಾಬ್ ವಹ್ಹಾಬ್ ದೊಡ್ಡಮನೆ ಎಲ್ದಿಯೆ ಬೂಕ್‌ಲ್ ಚೆನ್ನೆ ಪೋಲೆ ಕೋಟೇಶ್ವರತ್ತೆ ೧೫೫೧ನೇ ಇಸವಿಲ್ ಎಪ್ರಿಲ್ ೧೧ನೇ ತಾರೀಕ್ ಚನಿಯಾಸೆಡನ್ನ್ ಕೋಟೇಶ್ವರತ್ತೆ ಕೊಡಿ ಉತ್ಸವತ್ತನ್ನ್ ಬೆರಮೊರ್, ಶೂದ್ರಮ್ಮಾರೆ ನಡೂಲ್ ನಡನ್ನೆ ಗಲಾಟೆ, ಚೋರೆ ಕಲಿಲ್ ಅವಸಾನಮಾಯಿತ್ ಪಲೇ ಆಲ್ ಮಾರ್ ಕಲಾಸಾಯಿತ್, ಸುಮಾರ್ ತಿಜೊಲು ದೇವಸ್ಥಾನ ಬಂದ್ ಆಯ್ತ್, ಉತ್ಸವ ನಿನ್ನ್ ಪೋಯೆದ್ ಪಾಡೆ ಸುರುವಾಕೊಗು ಅಪ್ಪತ್ತೆ ವಿಜಯನಗರ ಆಡಲಿತತ್ತೆ ಸಿಪಾಯಿ ಏಕದಲಖಾನ್ (ಇಕ್ಬಾಲ್ ಖಾನ್) ಚೊಲ್ಲುಡಯಲ್ ನ್ಯಾಯ ತೀರ್ಮಾನ ಆಕಿತ್ ಪಾಡೆ ಉತ್ಸವ ನಡಕುಂಪೋಲೆ ಆಕ್ಕೆದ್ ಐತಿಹಾಸಿಕ ದಾಖಲೆ ಉಂಡು. ಪಲೇ ದೇವಸ್ಥಾನಜಲೆ ಉತ್ಸವತ್ತೆ ಸಮಯತ್ತ್, ತೇರ್ ಬಲಿಕ್ಕೊಗ್, ತೇರ್ ಚಮಕ್ಕೊಗ್ ನಾಟ್‌ಡೆ ಬ್ಯಾರಿಜಲೆ ಸಹಕಾರ ಇಂತ್. ಪಲೇ ದೇವಸ್ಥಾನಂಜ, ಪಲ್ಲಿಂಜೊಗ್ ಒರೇ ನಮೂನಿಡೆ ತಸ್ತೀಖ್, ಕಾಣಿಕೆಜ ಬಂಡೆದ್ ಪಲೇ ಭೂಮಿ ದಾಖಲೆಂಜಲಿಲ್ ನೋಕಗ್ ಕಿಟ್ಟ್‌ಡ್. "ಪಲ್ಲಿ ಮರ್ಯಾದೆ"ಯುಂ ಕೊಡ್ಕುಡೆದ್ ನಾಟ್‌ಲ್ ಪರಂಪರೆ ಇಂತ್ ಚೊಲ್ಲುಡೆದ್ ದಾಖಲೆಜಲಿಲ್ ಕಂಡ್ ಬಂಡ್. ಇದಲ್ಲಾಂಟ್ ಬಪ್ಪ ಬ್ಯಾರಿ ಪೋಲತ್ತೆ ಪಲೇ ಬ್ಯಾರಿ ಸಮುದಾಯತ್ತೆ ಐತಿಹಾಸಿಕ ಮಹತ್ವ ಉಲ್ಲೆದಾಯೆ ಮಹನೀಯ ನೇದಾಕಮ್ಮಾರ್ ದೇವಸ್ಥಾನತ್ತ್‌ಗ್ ಸಹಾಯಿಚ್ಚೆ ದಾಖಲೆಜ ಬೇನೆತ್ತ್‌ರೆ ಉಂಡು. ಪಲೇ ತುಳು ಪಾಡ್ದನಂಜಲ್ಲ್ ಬ್ಯಾರಿಜಲೆ ವಿವರ ಗೌರವತ್ತೋಡು ಉಲ್ಲೆದ್ ದಾಖಲೆಜ ಉಂಡ್. ಬ್ಯಾರಿ ಸಮುದಾಯತ್ತೆ ಬಾನೆಗಾರೆ ಕುಟುಮತ್ತಜೊಗು ವಿಶೇಷಾಮಾಯೆ ಮರ್ಯಾದೆ ಇಂತ್. ಇಜನತ್ತೆ ಸೌಹಾರ್ದ, ಸಮಾನತೆಡೆ ಪರಂಪರೆಮೇ ಬ್ಯಾರಿ ಖೌಮುಡೆ ಆಗತ್ತ್‌ಲ್ ಸಹಜಮಾಯಿತ್ ಇಂತ್ ಚೊಲ್ಲ್‌ಡ್‌ದ್ ಅಲ್-ಬರೂನಿ, ಇಬ್ನ್ ಬತೂತ ಇಂಜನೆ ಪಲೇ ಪ್ರವಾಸಿಜ, ಬೆಲ್ಲೆಕ್ಕಾರ್ ಇತಿಹಾಸಕ್ಕಾರ್ ದಾಖಲೆ ಎಲ್ದಿಡಾರ್ ಮಾತ್ರ ಅಲ್ಲ, ಅದ್ ಇನ್ನುಂ ನಜಲೆ ಖೌಮುಡೆ ಒಡಮುಲ್ ಉಂಡು ಚೆಂತ್ ನಾನೂಡೆ ವಿಶೇಷಮಾಯಿತ್

ಒತ್ತಿತ್ ಚೆಲ್ಲಗ್ ಇಷ್ಟಪಡ್‌ಡೆ. ಇನ್ನತ್ತೆ ನಾಲ್‌ಲ್ ಖೌಮಿ ದೇಹ್‌ಷತ್, ಪಗೆ, ದೊಂಬಿ ನಡಕ್ಕ್‌ಡೆ ಪರಿಸ್ಥಿತಿಲ್ ಮುಖ್ಯಮಾಯಿತ್ ನಿಜೊಗು ನೆನಪಾಕೊಗು ಇಷ್ಟಪಡ್‌ಡೆ.

ಇನ್ನ್ ಸೌಹಾರ್ದ, ಸರ್ವಧರ್ಮ ಸಮನ್ವಯತ್ತೆ ಪರಂಪರೆಡೆ ಸೂಫಿ ವಲಿಯುಲ್ಲಾಹ್, ಪಾಡ್‌ಡೆ ಜೌಲಿಯಾ ಚೆಲ್ಲ್‌ಡೆ ಪೇರ್ ಉಲ್ಲೆದಾಯಿ ಬಾಬಾ ಬುಡಾನ್ ಹಯಾತುಲ್ ಔಲಿಯಾಡೆ ರಾಯ, ಚಿಕ್ಕಮಗಳೂರ್‌ಲ್ ಸರ್ವಧರ್ಮ ಸೌಹಾರ್ದತ್ತೆ ಪರಂಪರೆಡೆ ಕುರುಹಾಯಿ ಕಾಫಿಡೆ ಬಿತ್ತ್ ಬಿತ್ತಿತ್ ರಹಾತ್‌ಡೆ ಕಮ್ಮನ ಒರಿಮಿಚ್ಚೆ ನೆಲತ್ತ್‌ಲ್ ಬ್ಯಾರಿ ಸಾಹಿತ್ಯ ಸಮ್ಮೇಳನ, ಸಮೃದ್ಧಿ, ಇಲ್ಮ್, ಅಭಿವೃದ್ಧಿ, ಐಕ್ಯತೆ, ಹೊರ್‌ಮತ್ತ್‌ಡೆ ಘೋಷಣೊತ್ತೋಡು ಕೂಡಿ ಇತ್ತರೆ ಜೋಶ್‌ಲ್, ಸಂದೋಲತ್ತೋಡು ನಡಕ್ಕ್‌ಡೆದ್ ಒರಿ ಐತಿಹಾಸಿಕ ದಾಖಲೆ ನಿರ್ಮಾಣ ಆಕ್‌ಡೆದ್‌ಕ್ ಸಂದೇಹಮಿಲ್ಲ.

## ದೇಶ ಪ್ರೇಮಿ ಬ್ಯಾರಿಜ

ಬ್ಯಾರಿ ಖೌಮುಡೆ ಭಾರಿ ಕನಕ್ಕ್‌ಡೆ ಪಡೆಕ್ಕಾರ್, ಪಟ್ಟಾಲಕ್ಕಾರ್, ತಾಲೀಮ್‌ಕಾರ್. ಕಲಾಸಿಜ, ನಾಟ್‌ಡೆ ರಕ್ಷಣೆಗೋಸ್ಕರ, ಖೌಮುಡೆ ಪರಂಪರೆಡೆ ರಕ್ಷಣೆಗಾಯ್ತ್, ಬಲಿದಾನ ಕೊಡ್ತೆ ಪಲೇ ಬಿಸಯಜ ಇತಿಹಾಸತ್ತ್‌ಲೂಂ, ಲಾಗಾಯ್ತ್‌ಲ್ ಬನ್ನೆ ಬಾಯ್ದೆರೆಡೆ ದಾಖಲೆಲೂಂ, ಪಾಟ್ ಕಬಿತೆಂಜಲ್ಲೂಂ ಕಾಣೊಗು ಕಿಟ್ಟ್‌ಡ್. ಬಾಣೆ, ಕೃಷಿ, ಕಡಪ್ಪರತ್ತ್, ಮೀನ್ ಪಿಡಿಕ್ಕ್‌ಡೆ, ಪಡಾವ್ ಮಂಜಿಡೆ ಕಳಾಸಿಜ ಆಯಿತ್ ಮಾತ್ರ ಅಲ್ಲ. ಬ್ಯಾರಿಜ ಪಟ್ಟಾಲಕ್ಕಾರ್ ಆಯಿತ್ ಸೂರ ಎಡ್ತ್ತ್ ಪೇರ್ ಪೋಯಜ. ವಿಜಯ ನಗರ ಅರಸಮ್ಮಾರೆ ಕಾಲತ್ತ್, ತುಳುವ ಅರಸಮ್ಮಾರೆ ಆಸ್ಥಾನತ್ತ್, ಅಜಿಲಮ್ಮಾರ್, ಇಕ್ಕೇರಿ ಅರಸಮ್ಮಾರ್, ಬಂಗ ಅರಸಮ್ಮಾರ್, ಕೆಳದಿ ಅರಸಮ್ಮಾರ್ ಕಾಲತ್ತ್ ಮೂಸ ಬ್ಯಾರಿ ಪೋಲತ್ತೆ ಪಲೇ ಸರದಾರಮ್ಮಾರ್, ಪಟ್ಟಾಲಕ್ಕಾರ್ ಬ್ಯಾರಿಜ ಇನ್ನರ್. ಪರದೇಶತ್ತೊಟ್ಟುಗ್ ಇನ್ನೆ ಬ್ಯಾರಿಜಲೆ ಬಾಣೆಗ್ ಎದುರಾಯಿತ್ ತಿಕ್ಕಾಟತ್ತ್‌ಗ್ ಮುನ್ನೊಲು ನಿನ್ನಜ ಪೋರ್ಚುಗೀಸಮ್ಮಾರ್. ಮೈಕಾಲತ್ತೆ ಬಂದರ್‌ಗ್ ಅಜ ಧಾಳಿ ಇಟ್ಟೆಪ್ಪ ಎದುರುನಿನ್ನಜ ಬ್ಯಾರಿಜ. ಉಳ್ಳಾಲತ್ತೆ ರಾಣಿ ಅಬ್ಬಕ್ಕಡೆ ಪೋರ್ಚುಗೀಸಮ್ಮಾರೊಟ್ಟುಗು ಪಡೆ ಎಡ್ತೆ ಪಟ್ಟಾಳತ್ತ್ ಬ್ಯಾರಿಜ ಬಹುಮುಖ್ಯ ಸಂಖ್ಯೆಲ್ ಇನ್ನರ್. ಬ್ರಿಟೀಷಮ್ಮಾರೆ ವಿರುದ್ಧತ್ತೆ ಸ್ವಾತಂತ್ರ್ಯ ಹೋರಾಟತ್ತ್‌ಲ್ ಟಿಪ್ಪು ಸುಲ್ತಾನ್‌ಡೆ ಪಟ್ಟಾಳತ್ತ್ ಪಿಡಿಚ್ಚಿತ್, ಮಹಾತ್ಮ ಗಾಂಧೀಜಿಡೆ ನೇತೃತ್ವತ್ತೆ ಸ್ವಾತಂತ್ರ್ಯ ಚಳವಳಿಲೂಂ ಬೇನತ್ತರೆ ಬ್ಯಾರಿಜ ಹೋರಾಡಿತ್ ತನು ಮನ ಧನ ತ್ಯಾಗತ್ತೋಡು ನಾಡ್‌ಗಾಯಿತ್ ಬಲಿದಾನ ಎಡ್ತ್‌ಡರ್. ಇದ್‌ಲ್ ಎನಿಚ್ಚಿ ಕಾಂಡೆ ಪೇರ್‌ಜ ಚೆನ್ನೆಂಗಿ ಫರಂಗಿ ಪೇಟೆಡೆ ಜನಾಬ್ ಹುಸೈನ್ ಒಡೆಯರ್, ಉಪ್ಪಿನಂಗಡಿಡೆ ಜನಾಬ್ ಹಕೀಮ್ ಹಾಜಿ ಹಸನ್, ಪುತ್ತೂರ್‌ಡೆ ಜನಾಬ್ ಸಾಲ್ಮರ ಅಬ್ಬುಬ್ಬ, ನಜಲೊ ಉಲ್ಲಾಲತ್ತೆ ಜನಾಬ್ ಬಿ.ಎಂ. ಇದ್ದಿನಬ್ಬ ಇಜನೆ ಪಲೇ ಪೇರ್‌ಜ ಉಂಡು. ಬ್ಯಾರಿಜೊಗು ದೇಶಪ್ರೇಮ ಆರೂಂ ಪಡಿಪ್ಪಾಟೊನೂಂಟಿಲ್ಲೆ. ಮುಖ್ಯವಾಹಿನಿಡೆ ತೆರು ಕಾಟೊನೂಂಟಿಲ್ಲೆ. ನಂಜಲೆ ಚೋರಡೆ ಕಣ ಕಣತ್ತ್‌ಲುಂ ದೇಶಪ್ರೇಮ ಸೇರಿತುಂಡು.

## ಬ್ಯಾರಿ ಭಾಷೆ

ಬ್ಯಾರಿ ಭಾಷೆ ಒರು ಚಂದತ್ತೆ, ವೈವಿಧ್ಯಮಯ ತಾಕತ್ತುಲ್ಲೆ ಭಾಷೆ. ಕಾಸರಗೋಡುಡೆ ಪಿಡ್ಚತ್ ಕಾರವಾರ ತೋಲೊ ಯಾರ ಕೊರೊಡಿ ೧೨ ಲಾಕ್ ಬ್ಯಾರಿಜ ಪಲಕ ಪರೆಯಿಡೆ ಭಾಷೆ. ಆಯಾಯ ಪ್ರಾಂತ್ಯತ್ತಜ ಈ ಭಾಷೆದೆದ್ ಬೇರೆ ಬೇರೆ ಎಸೆಲ್, ಲಯತ್ತ್‌ಲ್ ಪಲಕ್ಕ ಪರೆಯಿಡೆ ನೋಕ. ಪುತ್ತೂರು ಬಂಟ್ವಾಳಕ್ಕಾರೆ ಪಲಕ, ಮೈಕಾಲತ್ತಜಲೆ ಪಲಕ, ಉಡುಪಿಡಜಲೆ ಪಲಕ, ಕುಂದಾಪುರತ್ತೆಜಲೆ ಪಲಕ ಪಲೇ ವಿಧತ್ತ್‌ಲ್ ಉಂಡ್. ಈ ಪಲಕಜಲ್ಲೆಲ್ಲ ಚಂದತ್ತೆ ಒರು ಎಸೆ ಉಂಡ್, ಆ ನಾಟ್‌ಡೆ ಮಣ್ಣ್‌ಡೆ ಗುಣತ್ತ್‌ಗ್ ಸಮ ಆಯೆ ಶಬ್ದ ಭಂಡಾರಜ ಉಂಡ್. ಇದ್‌ರೆಲ್ಲ ಅಭ್ಯಾಸ ಆಕುಂಪೋಲತ್ತೆ ಒರು ವ್ಯವಸ್ಥೆ ಆವೊನು. ಅಜನೇಮೇ ವ್ಯವಹಾರತ್ತ್ ಉಪಯೋಗ ಆಕ್‌ಡೆ ಚೆನ್ನೆಂಗಿ ಕೃಷಿಲ್, ಬಾಣೆಲ್, ಮೀನ್ ಬಾಣೆಡೆ ವೃತ್ತಿಜಲ್ಲೊ ಇನಿ ಪಲೇ ವೃತ್ತಿ ವಿಶೇಷಮಾಯೆ ಶಬ್ದಜ ಬಳಕೆಲೆ ಉಂಡು. ಅದ್‌ಜಲೆ ಒಟ್ಟಾಕಿತ್ ಒರು ಶಬ್ಧಕೋಶ ಆಕೊನು. ಬ್ಯಾರಿ ಖೌಮುಡೆ ಪೋಲೆಮೇ ಬ್ಯಾರಿ ಭಾಷೆ ಸೈತ ಬೇರೆ ಖೌಮುಜಲೊಟ್ಟುಲು ಒರಿಮಿಚ್ಚಿ ಕೂಟಿತ್ ಬೆಲಂಞಿಡ್. ಒರು ಏದೇ ಭಾಷೆ ಆಯೆಂಗೂ ಅದ್ ನಜಲೆ ಅಭಿಪ್ರಾಯಜಲೆ ಬೇರೆ ಒರುತರ್‌ಗ್ ತೆರಿಪ್ಪಾಟ್‌ಡೆ ಮಾಧ್ಯಮ ಮಾತ್ರ ಅಲ್ಲ. ಅದ್

ಒರು ಪರಂಪರೆಡೆ, ಸಂಸ್ಕೃತಿಡೆ, ಸಮುದಾಯತ್ತೆ ಪಡಿಅಚ್ಚ್-ನೆರಲ್ ಆಯಿತಿಕ್ಕ್‌ಡ್. ಭಾಷೆ ಬೆಲೆಯೊನೆಂಗ್ ಅದ್ ನಿನ್ನೆ ತನ್ನಿಡೆ ಪೋಲೆ ಇಕ್ಕೊಗು ತೀರ. ಪರಕ್ಕ್‌ಡೆ ತನ್ನಿ ಪೋಲೆ ಇಕ್ಕೊನು. ನಜ ಭಾಷೆಡೆ ಶುದ್ಧಾಚಾರತ್ತ್‌ಗ್ ಒತ್ತು ಕೊಡ್ತೆಂಗ್ ಭಾಷೆ ಬೆಲೆಯೊನೆಂಗ್ ಕೊಡು ಎಡಕ್ಕ್‌ಡೆದ್ ಇಕ್ಕೊನು. ಭಾಷೆ ತಂಡೆ ಒಟ್ಟುಲುಲ್ಲೆ ಶಬ್ಧಜಲೆ ಬೇರಜಗ್ ಕೊಡ್ಕೊನು, ತನ್ಕ್ ಬೇನಾಯೆ ಶಬ್ಧಜಲೆ ಬೇರೆ ಭಾಷೆ ಎಡ್ತೊಲೊನು, ಅಪ್ಪ ಮಾತ್ರ ಭಾಷೆ ಬೆಲೆಯೊಗು ಸಾಧ್ಯ ಆವುಡು. ಬ್ಯಾರಿ ಭಾಷೆಲ್ ತುಳು ಶಬ್ಧಜ ಬೇನತ್ತರ ಉಂಡು, ಮಲೆಯಾಳಿ, ಕನ್ನಡ, ತಮಿಳ್, ಅರಬಿ, ಉರ್ದು ಬಾಷೆಜಲೆ ಪಲೇ ಶಬ್ಧಜ ಒರಿಮಿಚ್ಚಿತ್ ಉಂಡ್. ಇದೆಲ್ಲ ಬಾಷೆ ಬೆಳೆಯೊಗು ನಲ್ಲೆ ತೆರು ಆಕಿಕೊಡ್ಕುಡ್. ಬಾಷೆಗ್ ಲಿಪಿ ಬೇನು. ಅಯೆಂಗಿ, ಲಿಪಿ ಇಲ್ಲಾತ್ತೆ ಭಾಷೆ ಬೆಲೆಯಲೆ ಚೆಂತ್ ಚೆಲ್ಲ್‌ಡೆದ್ ತಪ್ಪು. ಹಿಂದಿ, ಮರಾಠಿ ಪೋಲೊತ್ತೆ ಬೆಲಿಯೆ ಭಾಷೆಜಗೂಂ ಲಿಪಿ ಇಂತಿಲ್ಲ. ದೇವನಾಗರಿ ಲಿಪಿಲ್ ಇನ್ನ್‌ಗೂ ಈ ಭಾಷೆಜಲೆ ಎಲ್ದ್‌ಡರ್. ನಜಲೆ ತುಳು, ಕೊಂಕಣಿ, ಕೊಡವಭಾಷೆಜಗೂಂ ಈ ಸಮಸ್ಯೆ ಉಂಡೆಂಗೂಂ ಕನ್ನಡ ಅಕ್ಷರಜಲೆ ಉಪಯೋಗ ಆಕ್ಯೊಂತ್ ಪರಿಹಾರ ಕಂಡೊಂಟ್‌ಡರ್. ಬ್ಯಾರಿ ಭಾಷೆಗ್ ಬಟ್ಟೆಎಲ್ತ್, ಅರಬಿ ಮಲಯಾಳ ಅಕ್ಷರಜಲೆ ಉಪಯೋಗ ಆಕ್‌ಡೆ ಬಗ್ಗೆ ಕೊರಿಯ ಆಲ್‌ಮಾರ್ ಅಭಿಪ್ರಾಯ ತಂಡರ್, ಆಯೆಂಗಿ ಈ ಅಕ್ಷರಜ ಎತ್ತರೆ ಮಟ್ಟ್‌ಗ್ ಪರಿಹಾರ ತಂಡ್ ಚೊಲ್ಲ್‌ಡೈಕ್ ನಕ್ಕ್ ಮಸ್ತ್ ಅನುಮಾನ ಉಂಡ್. ಆಯೆದ್‌ಕೊಂಡ್‌ತ್, ಓದೊಗು ಸುಲಭ, ಎಲ್ದೊಗು ಸುಲಭ ಆವ್‌ಡೆ ಕನ್ನಡ ಅಕ್ಷರಜಮೇ ಉಪಯೋಗ ಆಕ್‌ಡೆದ್ ನಲ್ಲೆದ್ ಚೆಂತ್ ನಂಡೆ ಅಭಿಪ್ರಾಯ. ಭಾಷೆ ಬೆಲೆಯೊನೆಂಗಿ ಸಾಹಿತ್ಯ ಕೃತಿಜ ಬರೊನು. ಸಾಹಿತಿಜಗ್ ಮುನ್ನೊಲು ಓದ್‌ಡೆಜ ಬೇನ್. ಇನ್ನ್ ಬ್ಯಾರಿ ಸಾಹಿತಿ ಮಾರ್ ಭಾರಿ ಸಂಖ್ಯೆಲ್ ಬ್ಯಾರಿ ಭಾಷೆಲ್, ಕನ್ನಡತ್ತ್‌ಲ್ ಎಲ್ದಿಯೊಂಟುಲ್ಲರ್ ಚೆಲ್ಡೆದ್ ಸಂದೋಲತ್ತೆ ಬಿಸಯ. ಆಯೆಂಗಿ, ಬ್ಯಾರಿ ಭಾಷೆಲ್ ಎಲ್ದಿಯೆಂಗ್, ಬೂಕುಜ ಬನ್ನೆಂಗಿ ಪೈಸ ಕೊಡ್ತ್‌ತ್ ಎಡ್ತೊಂತ್ ಓದ್‌ಡಜ ಭಾರಿ ಕೊರೊಡಿ ಚೆಲ್ಲ್‌ಡೆದ್ ಸಾಹಿತಿಮಾರೆ ಸಮಸ್ಯೆ. ಇದ್ ಬ್ಯಾರಿ ಭಾಷೆಡೆ ಪತ್ರಿಕೆಜೊಗೂಂ ಅನ್ವಯಿಸ್‌ಡ್. ಬ್ಯಾರಿ ವಾರ್ತೆ ಪೋಲತ್ತೆ ಸುಮಾರ್ ಬ್ಯಾರಿ ಪತ್ರಿಕೆಜ, ಇಪ್ಪ ಕಾಣೊಗು ಕಿಟ್ಟಾತ್ತೆದ್ ಇದೇ ಕಾರಣತ್ತ್. ಎತ್ತರೆ ತೊಡಕಾಯೆಂಗುಂ, ನಜಲೆ ಭಾಷೆ ಒಲಿಯೊನು, ಬೆಲೆಯೊನು, ಚೆಲ್ಡೆ ಉದ್ದೇಶತ್ತೋಡು, ಓದೊನು, ಬೂಕುಜಲೆ ಎಡ್ತೊಲೊನು ಚೆಂತ್ ನಾನ್ ನಿಜಲೊಟ್ಟುಗು ಕೇಟೊಲ್ಡೆ.

## ಬ್ಯಾರಿ ಸಮಾಜತ್ತೆ ಸಮಸ್ಯೆಜ

ಬ್ಯಾರಿ ಖೌಮುಡೆ ಸಮಸ್ಯೆಜ ಮಸ್ತ್ ಉಂಡು. ಈ ಸಮಸ್ಯೆಜಲೆ ಕಾರಣತ್ತ್ ನಜ ಭಾರತತ್ತೆ ತೀರಾ ಪೆರಗೆ ಉಲ್ಲೆ ಖೌಮುಜಲೆ ಪೈಕಿಲ್ ಒನ್ನು ಚೆಂತ್ ಪರಿಗಣಿಸಿಡ್. ಇದ್ ನಜಗ್ ಒರು ಎಸರತ್ತ್ ಚೆಂತ್ ನಿರಿಚ್ಚಿತ್ ಇದ್‌ಡೆ ಪರ್ತ್ ಬರೊಗು ಕೋಶಿಸ್ ಆಕೊನು. ನಜಲೆ ಖೌಮು ಇಂಡ್ ಎದುರಾಕೊಣುಗು ಉಲ್ಲೆದಾಯೆ ಪಲೇ ಸಮಸ್ಯೆಜಲೆ ಪೈಕಿ ಕೊರಿಯ ಸಮಸ್ಯಜಲೆ ಊಡೆ ನಿಜಲೆ ಮುನ್ನಿ ಬೈಕೊಗು ಇಷ್ಟಪಡ್‌ರೆ.

## ಶಿಕ್ಷಣತ್ತೆ / ಇಲ್ಮ್‌ಡೆ ಕೊರತೆ - ಕಂದಾಚಾರ / ಮೂಢನಂಬಿಕೆ

ದೀನಿ ತಾಲೀಮ್‌ಡೆ ಒಟ್ಟುಗು ದುನಿಯಾವುಗಾಯಿತ್ ಆಧುನಿಕ ಇಲ್ಮ್, ಶಿಕ್ಷಣ ಅಗತ್ಯ ಎತ್ತರೆ ಉಂಡ್ ಚೆಂತ್ ಎಲ್ಲಾರೂಂ ತೆರಿಞಿದೆ. ಆಯೆಂಗೂಂ ಶಾಲೆಡೆ ಇಲ್ಮ್ ಪಡಿಪುಲು ಬ್ಯಾರಿಜ ಬ್ಯಾರೆ ಖೌಮುಜೊಗು ಹೋಲಿಸಿಯೆಂಗಿ ನಜ ಭಾರಿ ಪೆರಗೆ ಉಲ್ಲೆದ್ ಕಂಡ್ ಬಂತ್. ಬ್ಯಾರಿಜಲೆ ಚೆಂತ್ ಶಾಲೆ ಕಾಲೇಜ್ ಉಲ್ಲೆದ್ ಚೆನ್ನೆಂಗ್ ಜಂಡ್ ಮೂನ್ ಅದೂಂ ಮೈಕಾಲತ್ತ್ ಬುಟ್ಟೆಂಗಿ ಬೇರೆ ಎವುಡೆಯುಂ ಅಜನತ್ತೆ ಉತ್ಸಾಹ ಕಂಡ್ ಬಂಡಿಲ್ಲೆ. ಇದ್‌ಕ್ ಒರು ಮುಖ್ಯ ಕಾರಣ ಚೆನ್ನೆಂಗ್, ದೇಶ ಪ್ರೇಮತ್ತೆ ಜೋಶ್‌ಲ್ ಬ್ರಿಟೀಷ್ ಬೆಳ್ಳೆಕ್ಕಾರೆ ಇಲ್ಮ್ ಚೆಂತ್ ಪಂಡ್ ನಜ ಈ ಪಡಿಪ್ಪುಡೆ ದೂರ ಆಕಿಯೆದ್. ಆರ್ಥಿಕ ಸಮಸ್ಯೆಜ, ಉಮ್ಮ ಅಬ್ಬೊಗು ಪಡಿಪು ಇಲ್ಲಾತ್ತೆದ್, ಅಸಡ್ಡೆ, ಇದೆಲ್ಲ ಭಾರತ ದೇಶತ್ತೆ ಸಮಸ್ಯೆಮೇ ನಜಲೆದೂಂ ಸಮಸ್ಯೆ. ಇಪ್ಪತ್ತೆ ನಾಲ್‌ಲ್ ಇಲ್ಮ್ ಇಲ್ಲಾತ್ತೆಜ ಜೀವಿತತ್ತೆ ಏದೇ ಚೌಟು ಪಡಿಲೂಂ ಏಳ್ಗೆ ಕಾಣೊಗು ಸಾಧ್ಯ ಇಲ್ಲ ಚೆಂತ್ ಚೆಲ್ಲೊನಾವುಡು. ಆಯೆಂಗೂಂ ಒರು ಸಂದೋಲತ್ತೆ ಸಂಗತಿ ಚೆನ್ನೆಂಗ್, ಇನ್ನತ್ತೆ ನಾಲ್‌ಲ್ ಕಾಲೇಜ್ ಪಡಿಕ್ಕೊಗು ನಲ್ಲೆ ಸಂಖ್ಯೆಲ್ ಮಕ್ಕಜೊಗು ಬ್ಯಾರಿಜ ಅವಕಾಶ ಕೊಡ್ತ್‌ರರ್ ಚೆಲ್ಲ್‌ಡೆದ್. ಪಿನ್ನೆ ಖೌಮುಡೆ ೪% ಮಕ್ಕಜ ಮಾತ್ರ ಡಿಗ್ರಿ ಪದವಿ ತೋಲೊ ಪೋಂಡೆ ಇಪ್ಪೊಲ್ತೆ ಸಂಖ್ಯೆ, ೫೦% ಗಾಯೆಂಗೂ ಎತ್ತೊನು ಚೆಂತ್ ನಾನ್ ಆಸೆ ಆಕ್‌ಡೆ.

ಇಲ್ಮ್ ಪಡಿಪ್ಪ್ ನಜಲೆ ಖೌಮುಲು ಉಲ್ಲೆದಾಯೆ ಅಂಧ ವಿಶ್ವಾಸಜ, ಮೌಢ್ಯಜಲೇ ದೂರ ಆಕೊಗು ಸಹಕಾರಿ ಆವೊನು ಚೆಂತ್ ನಾನ್ ಆಸಿಕ್ಕ್‌ಡೆ.

**ಆರ್ಥಿಕ ಸಮಸ್ಯೆಜ:**

ನಜಲೆ ಖೌಮುಲು ಬಾಲೆಕ್ಕಾರ್‌ಗೆ ನಯಿಕೊಗು ಸರಿಯಾಯೆ ಅವಕಾಶ ಇಲ್ಲ, ಪಿನ್ನೆ ಬಡಪತ್ತ್‌ಲ್, ಚೇಯಿಚೊಂತು ಉಲ್ಲೆ ಪಾವತ್ತೆಜಲೆ ಸಂಖ್ಯೆ ೭೦% ಅಂಶತ್ತೆ ಕಾಣ ಮಸ್ತ್ ಯಾರ ಉಂಡು ಚೆಲ್ಲ್‌ಡೆದ್ ನಜ ನಲ್ಲೆ ಬಿಯಾರಿಕ್ಕೊನು. ಇದ್ ಆಂಡ್‌ಗ್ ಒರುಕ್ಕ ಪೈಸಗಾರ್ ಕೊಡುಕ್ಕುಡೆ ಝಕಾತ್‌ಲ್ ತೀರ್‌ಲ್ಲೆ ಚೆಲ್ಲ್‌ಡೆದ್ ನಲ್ಲೆ ಆಲೋಚನೆ ಆಕೊನು. ಈ ಬಡಪತ್ತ್ ಚೆಲ್ಲೆದ್ ಎಲ್ಲೆ ಸಮಸ್ಯೆಜಗೂಂ ಮೂಲ. ದುನಿಯಾವುಡೆ ರಹಾತ್‌ಗ್, ಸೊಕತ್ತ್‌ಗ್ ಎಂದ್‌ಗಾಯ್ತ್ ನಜ ಕೊದಿಕ್ಕೊನು ಚೆಲ್ಲ್‌ಡೆ ಚೆಲೆ ತೆರಿಂಞಜಲೆ ಪಲಕ್ಕೆ ಉಂಡ್. ಆಯೆಂಗಿ ದೀನ್/ ಅಖಿರ-ದುನಿಯಾ ಒನ್ನುಗೊನ್ನು ಪರಸ್ಪರಮಾಯಿತ್ ಆಧರಿಚ್ಚೊಂತು ಉಲ್ಲೆ ಬಿಸಯ ನೆಬಿ(ಸ.ಅ.) ತಂಜಲೆ ಪಲಕತ್ತ್‌ಲೇ ಕಂಡ್‌ಬಂಡ್. ಮುಖ್ಯಮಾಯಿತ್ ನಂಜ ಈ ದೇಶತ್ತೆ ಬಗ್ಗೆ ಅಭಿಮಾನಿಚ್ಚಿತ್ ಉಲ್ಲೆದ್ ಮಾತ್ರ, ಸಿವಾಯಿ, ನಜಲೆ ಪ್ರಜಾಪ್ರಭುತ್ವತ್ತ್‌ಲ್ ಉಲ್ಲೆದಾಯೆ ಪ್ರಜಾ ಹಕ್ಕ್‌ಜಲೆ ಎತ್ತರೆ ನಜ ತೆರಿಞಿಡ? ಸರಕಾರತ್ತೊಟ್ಟುಗು ಈ ಹಕ್ಕ್‌ಜಲೆ ಕೇಕೊಗು ಎತ್ತರೆ ಮಟ್ಟ್‌ಲ್ ಪ್ರಯತ್ನ ಆಕಿಡ? ನಲ್ಲೆ ಖಿಯಾಲಾಕೊನು, ದೇಶತ್ತೆ ಒಟ್ಟು ಸಂಖ್ಯೆಡೆ ಸಾಧಾರಣ ೧೫% ಉಲ್ಲೆ ಮುಸ್ಲಿಮೀಜಲೆ ಪರ್ತ್ ಬೆಚ್ಚಿತ್ತ್, ಈ ನಜಲೆ ಪಿರ್‌ಸ್ಪೆಟ್ಟೆ ಭಾರತ ದೇಶ ಅಭಿವೃದ್ಧಿ ಆವುಡು ಚೆಂತ್ ಚೆನ್ನೆಂಗಿ ಅದ್ ಬೆರೂಂ ಒರು ಚದಿಡೆ ಕಿನಾವು ಮಾತ್ರ. ಇದ್ ಬ್ಯಾರಿಜಲೆ ಸಮಸ್ಯೆ ಮಾತ್ರ ಅಲ್ಲ. ಭಾರತತ್ತೆ ಸಮಸ್ಯೆ, ಎಲ್ಲೆ ಮುಸ್ಲಿಮ್ ಸಮುದಾಯತ್ತೆ ಸಮಸ್ಯೆ ಕೂಡ. ಇದ್‌ರೆ ಪರ್ತ್ ಬರೊನೆಂಗಿ, ನಜಲೆ ರಾಜಕೀಯ ನೇದಾಕಮ್ಮಾರೆ ಮುದುಪಿಡಿಚ್ಚೆಂಗಿ ಪೋರಲೆ, ನಜಲೆ ಹಕ್ಕ್‌ಗ್ ನಜಮೇ ಶಾಂತಿ ಸಮಧಾನತ್ತೆ ಪ್ರಜಾಸತ್ತಾತ್ಮಕಮಾಯೆ ಹೋರಾಟತ್ತ್‌ಗ್‌ಇಲಿಯೋನೇ ಸಿವಾಯಿ, ಕೈಕೆಟ್ಟಿತ್ ದೆಚ್ಚಿತ್ ಮೇಲ್ ನೋಕಿತೆಂಗಿ, ಸಮಸ್ಯೆಗ್ ಸಮಾಧಾನ ಕಿಟ್ಟಲೆ.

**ಸಮುದಾಯತ್ತೆ ಪೆಣ್ಣಜಲೆ ಸಮಸ್ಯೆಜ**

ನಜಲೆ ಖೌಮುಡೆ ಸಂಖ್ಯೆಲ್ ಪಾದಿಡತ್ತರೆ ಅಂಶ ಉಲ್ಲೆದಾಯೆ ಪೆಣ್ಣಜಲೆ ಬಗ್ಗೆ ಆಲೋಚನೆ ನಲ್ಲೆ ಆಕೊನು. ಇದ್ ನಂಡೆ ಪಲಕ ಮಾತ್ರ ಅಲ್ಲ, ಇದ್ ನೆಬಿ (ಸ.ಅ.) ಅರಫಾ ಮಲೆಲ್ ತಂಡೆ ಕಡೇಡೆ ಶಫಾಅತ್‌ಲ್ ಮುಮಿನೀಜೊಗು ಕೊಡುತ್ತೆ ಸಂದೇಶತ್ತೆ ಸಾರ ಕೂಡ. ಅದ್ದೂರಿಲ್ ಎಡ್ಕ್‌ಡೆ ಮಂಜೆಲೆ, ಕಾಸಿ, ಚಿಲ್ಲರೆ ರಕಮುಡೆ ಮಹರ್, ಇಲ್ಮ್/ಆಧುನಿಕ ವಿದ್ಯಾಭ್ಯಾಸತ್ತೆ ಅವಕಾಶ ಕೊಡುಕ್ಕಾತ್ತೆದ್, ಇಂಜನತ್ತೆ ಪಲೇ ಸಮಸ್ಯೆಜಲೆ ನಜಲೆ ಉಮ್ಮ ಪೆಂಜಮ್ಮಾರ್ ಎದುರಿಚ್ಚೊಂತು ಉಲ್ಲರ್. ಕುಟುಮತ್ತ್ ಆಣ್ ಮಕ್ಕಜ ಪಡಿಚ್ಚೆಂಗ್ ಅವುನು ಒರುತ್ತಗ್ ಮಾತ್ರ ಸಹಾಯ ಆವ್ರು. ಅದೇ ಪೆಣ್ಣ್ ಮೋಲು ಪಡಿಚ್ಚಲೆಂಗ್ ಇಡೀ ಒರು ಕುಟುಮಮೇ ಪಡಿಚ್ಚೆ ಪೋಲೆ ಆವುಡು ಚೆಲ್ಲ್‌ಡೆದ್ ನೇರ್ ಪಲಕ್ಕ. ಇನ್ನತ್ತೆ ನಾಲ್‌ಲ್ ಪೆಣ್ಣ್ ಮಕ್ಕಜಲೆ ಪಡಿಪು, ನೈಪು ಜಂಡೂಂ ಕುಟುಮತ್ತ್‌ಗ್ ಅಗತ್ಯ ಉಂಡು. ಆರ್ಥಿಕಮಾಯಿತ್ ಶಕ್ತಿ ಇನ್ನೆ ಪೆಣ್ಣಜಲೆ ಚೆಂತ್ ಸಮುದಾಯತ್ತೆ ಪಲೇ ಸಮಸ್ಯೆಜಲೆ ನಿವಾರಿಕ್ಕೊಗು ಸಾಧ್ಯ ಉಂಡ್. ಅಜನೇಮೇ ಸಮುದಾಯತ್ತೆ ಪಾದಿಡತ್ತರೆ ಸಂಖ್ಯೆಲ್ ಉಲ್ಲೆದಾಯೆ ಪೆಣ್ಣಜಲೆ ಏಳಿಗೆ ಮರನ್ನ್‌ತೆಂಗಿ, ಸಮುದಾಯತ್ತೆ ಏಳಿಗೆ ಸಾಧ್ಯ ಇಲ್ಲ ಚೆಲ್ಲ್‌ಡೆ ಪಲಕ್ಕ ನಜ ನೆನಪುಲ್ ಬೆಯಿಕ್ಕೊನು.

**ಕೋಮು ಗಲಭೆ/ದೆಹ್‌ಷತ್ ಗರ್ದಿಡೆ ಸಮಸ್ಯೆ:**

ಇನ್ನತ್ತೆ ನಾಲ್‌ಲ್ ಬ್ಯಾರಿಜಲೆ ಅಸಹಾಯಕತೆ, ಪೇಡಿ, ಖೌಫುಗು ಅಪ್ಪಪ್ಪ ದಕ್ಷಿಣ ಕನ್ನಡತ್ತ್ ನಡನ್ನೊಂತುಲ್ಲೆ ಕೋಮು ಗಲಭೆಜ ಕಾರಣ. ಖೌಮುಡೆ ಒರ್ತಡೆ ಕೊಂಡುತ್ ಆಯೆ ತಪ್ಪು, ಅಲ್ಲೆಂಗಿ ಒರು ಕಾತ್ ಸುದ್ದಿಡೆ ಕಾರಣತ್ತ್‌ಗ್ ಎಪ್ಪ ಗಲಭೆ ಎನಿಕ್ಕ್‌ಡ್, ಎಪ್ಪ ಕೋಮು ಗಲಭೆ ಸುರುವಾಯಿತ್, ಎಂದೂ ತೆರಿಯಾತ್ತೆ ಪಾವತ್ತೆಜ ಬಲಿ ಆವುಡರ್ ಚೆಂತ್ ಚೆಲ್ಲಗಾವತ್ತೆ ಅತಂತ್ರತ್ತೆ ಬದ್‌ಕ್ ಬೆಲ್ಲೆ ಸಮಸ್ಯೆ ಆಯಿತ್ ಉಂಡು. ಕೋಮು ಸೌಹಾರ್ದತ್ತೆ ಕೇಂದ್ರಮಾಯಿತ್ ಉಲ್ಲೆದಾಯೆ ಕೇಂದ್ರಜಲ್ಲೂಂ ಕೋಮುವಾದತ್ತೆ ವಿಷಕಾತ್ ಬೀಞಿತ್ ಉಸಿರೆಡ್ಕಾತ್ತೆ ಪೋಲತ್ತೆ ವಾತಾವರಣ ಸೃಷ್ಟಿ ಆಯೆದ್ ಬಲ್ಲಾತ್ತೆ

ಅಪಾಯ ಉಂಡಾಯಿಡ್. ಇದ್‌ಡೆ ನಿವಾರಣೆಗ್ ಪ್ರಬಲ ರಾಜಕೀಯ ಇಚ್ಛಾಶಕ್ತಿ ಬೆಲೆಯೊಣು. ಎಂದ್‌ಗ್ ಚೆನ್ನೆಂಗಿ, ಕೋಮುವಾದ ಅದ್‌ರತ್ತರೆ ಇನ್ನೆಂಗ್ ಅತ್ತರೆ ಬೆಲಿಯ ಅಪಾಯ ಇಲ್ಲ. ಕೋಮುವಾದತ್ತ್‌ಗ್ ರಾಜಕೀಯತ್ತೆ ಬೆಂಬಲ ಇನ್ನೆ ಸಾತ್‌ಗ್ ಅದ್ ಅತ್ಯಂತ ಅಪಾಯಕಾರಿ ಆಯಿತ್ ಬೆಲೆಯಿಡ್. ಈ ಎಸರತ್ತೋಡು ಕೂಡಿ ಕೋಮು ಗಲಭೆಡೆ ಸಮಸ್ಯೆಗ್ ಸಮಾಧಾನ ಕಂಡ್ ಪಿಡಿಕ್ಕೊನು. ಎಲ್ಲೆ ಖೌಮುಡೆ ಆಮ್ ಮನಿಷಮ್ಮಾರ್ ಶಾಂತಿ, ಸಬೂರ್, ಸೌಹಾರ್ದತೆಲ್ ವಿಶ್ವಾಸ ಬೆಯಿಕ್ಕ್‌ಡೆಜ ಆಯೆಂಗೂಂ ರಾಜಕೀಯತ್ತೆ ಬೇಳೆ ಬೇಯೊಗಾಯಿತ್ ಬಿತ್ತ್‌ಡೆ ಅನುಮಾನ/ಸಂಶಯತ್ತೆ ಬಿತ್ತ್‌ಗ್ ಬೇಗ ಬಲಿ ಆವುಡರ್. ಏಕತೆ, ಸೌಹಾರ್ದತೆಡೆ ಎತ್ತರೆ ಭಾವುಕ ಘೋಷಣೆಜೊಂ, ನೇರ ಸಾಕ್ಷ್ಯಜೊಂ ಇದ್‌ಡೆ ಮುನ್ನಿಲ್ ಸೋಕುಡು.

ಪಿನ್ನೆ ಒರು ಬೆಲಿಯೆ ಅಪವಾದತ್ತೆ ನಜ ಎದುರಾಕೊನಾಯೆದ್ ದೆಹ್‌ಷತ್ ಗರ್ದಿ ಅಲ್ಲೆಂಗಿ ಟೆರ್ರರಿಸಂ ಚೆಲ್ಲ್‌ಡೆ ಭೀಕರಮಾಯೆ ಸಮಸ್ಯೆ. ಇದ್ ಇನ್ನ್ ದುನಿಯಾವುಲುಲ್ಲೆ ಎಲ್ಲೆ ಮನುಷ್ಯ ಸಮುದಾಯತ್ತೆ, ಅದ್ಲೂಂ ಮುಖ್ಯ ಮಾಯಿತ್ ಮುಸ್ಲಿಮೀಜಲೆ ಎದುರುಲ್ಲೆದಾಯೆ ಸಮಸ್ಯೆ. ಬ್ಯಾರಿ ಸಮುದಾಯತ್ತೆದೂಂ ಬುಟ್ಟುತ್ತಿಲ್ಲೆ. ವಿಶ್ವತ್ತ್‌ಲ್ "ಇಸ್ಲಾಮಿಕ್ ಟೆರರಿಸಂ" ಚೆಂತ್ ಪೇರ್ ಬೆಚ್ಚೆ ಭಾರಿ ಬೆಲಿಯೆ ಫಿತ್ನ ಬೆಲಿಯೆ ಶಕ್ತಿಯೋಡು ಕೂಡಿತ್ ಸೊರ ಆಕ್ಕೊಂತುಂಡು. ಭಾರತತ್ತೆ ಕೋಮುವಾದಿಜ "ಎಲ್ಲೆ ಮುಸ್ಲಿಮೀಜ ಟೆರರಿಸ್ಟ್‌ಮಾರಲ್ಲ, ಆಯೆಂಗಿ, ಎಲ್ಲೆ ಟೆರರಿಸ್ಟ್‌ಮಾರ್ ಮುಸ್ಲಿಮೀಜ" ಚೆಲ್ಲ್‌ಡೆ ಸುಲಭ ಸಮೀಕರಣ ಆಕಿತ್ ಫಿತ್ನೆ ನಡಪ್ಪಾಟಿಯೊಂತುಲ್ಲರ್. ಇದ್ ಎಲ್ಲೆ ಕಣಕ್ಕ್ ತಯಾರಾಕಿತ್ ಆಕಿಯೆದಾಯೆ ಫಿತ್ನೆ. ಎಂದ್‌ಗ್ ಚೆನ್ನೆಂಗ್, ಇಡೀ ದುನಿಯಾವುಲು ಮುಸ್ಲಿಮ್ ಪೇರ್‌ಜ ಉಲ್ಲೆದಾಯೆ ಟೆರರಿಸ್ಟ್‌ಜ ಮಾತ್ರ ಉಲ್ಲೆದಲ್ಲ ಬೇರೆ ಎಲ್ಲ ಧರ್ಮತ್ತೆ ಟೆರರಿಸ್ಟ್‌ಮಾರ್ ಉಲ್ಲರ್, ಬ್ರಿಟನ್‌ಡೆ ಐ.ಆರ್.ಎ., ಇಸ್ರೇಲ್‌ಲ್, ಆಫ್ರಿಕಾತ್ತ್, ಅಮೇರಿಕಾತ್ತೆ ಕು-ಕ್ಲುಕ್ಷ್-ಕ್ಲಾನ್ ಚೆಲ್ಲೆ ವರ್ಣದ್ವೇಷಿ ಸಂಘಟನೆಜ ಮಸ್ತ್ ಉಂಡ್. ಭಾರತತ್ತೆ ಉಲ್ಫಾ, ನಾಗ, ರಣವೀರ್, ಸೇನಾ ಆಯಿರೆ ಗಟ್ಟಲೆ ಮುಸ್ಲಿಮೀಜಲೆ ಕೊಲೆ ಆಕಿಯೊ ಸಂಘ ಪರಿವಾರ, ಇಜಲೆಲ್ಲ ಆಯಾಧರ್ಮತ್ತೆ ಟೆರರಿಸ್ಟ್ ಚೆಂತ್ ಎಂದ್‌ಗ್ ಪೇರ್ ಬೆಚ್ಚಿತ್ತ್‌ಲ್ಲೆ? ಪಾವತ ಮನಿಷಮ್ಮಾರೆ ನಿಸ್ಕಾರುಣ ಕೊಲೆ ಆಕ್‌ಡೆ ಬೆಹಷತ್‌ಗ್, ಟೆರರಿಸಂಗ್ ಇಸ್ಲಾಮುಲು ಅವಕಾಶ ಕೊಡ್ತುಟ್‌ಲ್ಲೆ. ಟೆರರಿಸ್ಟ್ ಮಾರ್‌ಗೂಂ ಧರ್ಮತ್ತ್‌ಗೂಂ ಏ ಸಂಬಂಧವೂಂ ಇಲ್ಲೆ. ಇದ್ ನಜಲೆ ಇನ್ನತ್ತೆ ತೀರ್ಮಾನವೂಂ ಆವೊನು.

## ಬ್ಯಾರಿ ಪರಂಪರೆ/ಸಂಸ್ಕೃತಿ ಒಲಿಕೊನುಗಾಯ್ತ್ ಎಡುಕ್ಕೊನಾಯೆ ಕ್ರಮಜ

**೧. ಬ್ಯಾರಿ ಅಕಾಡೆಮಿ ಸ್ಥಾಪನೆಗ್ ಸರಕಾರತ್ತ್‌ಗ್ ಒತ್ತಾಯ :**

೧೨ ಲಾಖ್ ಡತ್ತರೆ ಸಂಖ್ಯೆಲ್ ಕರ್ನಾಟಕತ್ತ್‌ಲ್ ಉಲ್ಲೆ ಬ್ಯಾರಿಜಲೆ ೧,೪೦೦ ವರ್ಷತ್ತೆ ಸಂಸ್ಕೃತಿಡೆ ಒಲಿಕ್ಕೊನುಗು ಪಿನ್ನೆ ಸಾಹಿತ್ಯ ಕೃತಿಜಲೆ ಸೃಷ್ಟಿಕ್ಕೊಗು ಪ್ರೋತ್ಸಾಹ ಕೊಡುಕ್ಕೊಗಾಯಿತ್ ಬ್ಯಾರಿ ಸಾಹಿತ್ಯ ಅಕಾಡಮಿ ಸ್ಥಾಪನೆ ಆಕೊನೂಂಟು ಸರಕಾರತ್ತ್‌ಗ್ ಒತ್ತಾಯ ಆಕೊನು. ಅಕಾಡೆಮಿ ಸ್ಥಾಪನೆಗ್ ಸಮಯಾವಕಾಶತ್ತೆ ಗಡಿ ಕೊಡುಕ್ಕೊನು. ಇಲ್ಲಾಂತ್ ಕಂಡೆಂಗ್ ಬ್ಯಾರಿಜ ಬೀದಿಗ್ ಇಲಿಞಿತ್ ಈ ಬೇಡಿಕೆ ಈಡೇರಗಾಯಿತ್ ಪ್ರತಿಭಟನೆ ಆಕುವರ್ ಚೆಲ್ಲ್‌ಡೆದ್ ಸಾರಿತ್ ಚೆಲ್ಲೊನೂಂಟ್ ನಾನ್ ಆಗ್ರಹ ಆಕ್‌ಡೆ.

**೨. ಬ್ಯಾರಿ ಸಂಸ್ಕೃತಿ/ಪರಂಪರೆಡೆ ಅಭ್ಯಾಸ ಆಕೊಗು ಮಂಗಳೂರುವ ವಿಶ್ವವಿದ್ಯಾಲಯತ್ತ್‌ಲ್ ಒರು ಪೀಠ ಸ್ಥಾಪನೆ ಆವೊನು:**

ಬ್ಯಾರಿ ಸಂಸ್ಕೃತಿಡೆ ಪಲೇ ಭಾಗಜ, ಕಲೆಜ, ಕಲಿಜ, ಕರಕುಶಲ ವಸ್ತುಜ ಕಾಲತ್ತೆ ಅಡಿಕ್ ಬೂಂತು ನಿರ್ನಾಮ ಆಯಿಡ್. ಪಲೇ ಭಾಗಜ ಆಲಿಞೊಂತುಂಡು. ಪಲೇ ಬಾಯ್ದೆರೆಡೆ ಸಾಹಿತ್ಯಜ ಇಪ್ಪ ಬೇಗಮೇ ಒಟ್ಟಾಕಿಟಿಲ್ಲೆಂಗಿ ಆಲಿಞಿ ಪೋಂಡೆ ಅಪಾಯ ಉಂಡು. ಬ್ಯಾರಿ ಭಾಷೆಡೆ ವ್ಯಾಕರಣ, ವೈವಿಧ್ಯಮಯ ಸೊಲ್ಲು, ಶಬ್ದಜಲೆ ಅಭ್ಯಾಸ, ಸಂಶೋಧನೆ ಆವುಡೆ ಅಗತ್ಯ ಉಂಡು. ಇದ್‌ಕ್ ಮಂಗಳೂರು ವಿಶ್ವವಿದ್ಯಾಲಯತ್ತ್ ಬ್ಯಾರಿ ಸಾಂಸ್ಕೃತಿಕ ಅಧ್ಯಯನ ಪೀಠ ಆಕೊನುಗು ಬೇನಾಯೆ ಪ್ರಯತ್ನ ನಡಕ್ಕೊನು.

**೩. ಸಾಚಾರ್ ಕಮಿಟಿಡೆ ಶಿಫಾರಸ್‌ಜಲೆ ಜ್ಯಾರಿಗ್ ಕೊಂಬರೊನೂಂಟು ಒತ್ತಾಯ :**

ಭಾರತತ್ತೊ ಸ್ವಾತಂತ್ರ್ಯ ಆಯಿತ್ ೬೦ ಆಂಡ್ ತೀನೆಂಗೂ ಪಲೇ ಸ್ಥಿತಿಗತಿಲ್ ಬದಲಾಯೆಂಗೂಂ, ಮುಸ್ಲಿಮೀಜಲೆ

ಪರಿಸ್ಥಿತಿ ಸುಧಾರಿಚ್ಚಿಟಿಲ್ಲೆ. ಪಲೇ ಸರಕಾರಜೊಗ್ ಮುಸ್ಲಿಮೀಜಲೆ ಪರಿಸ್ಥಿತಿಡೆ ಬಗ್ಗೆ ವಿವರ ಮಾಯೆ ರಿಪೋರ್ಟ್‌ಜಲೆ ಮುನ್ನೊಲು ಕೊಡ್ತೆದ್ ಉಂಡು. ಬ್ರಿಟೀಷ್ ಗವರ್ನಮೆಂಟ್ ೧೯೩೫ ಒರಿ ರಿಪೋರ್ಟ್ ಎಡ್ತ್ತಿಂತ್. ೧೯೮೩ ಲ್ ಇಂದಿರಾ ಗಾಂಧಿಡೆ ಕಾಲತ್ತ್ ಡಾ। ಗೋಪಾಲ್ ಸಿಂಗ್ ಕಮಿಟಿ ಮುಸ್ಲಿಮೀಂಜಲೆ ಸ್ಥಿತಿಗತಿಡೆ ಬಗ್ಗೆ ರಿಪೋರ್ಟ್ ಕೊಡ್ತ್ತ್‌ಡ್. ಇದೇದೂಂ ಜಾರಿಗ್ ತರೂಂ ಪೋಲತ್ತೆ ಧೈರ್ಯ ಸರಕಾರ ಕಾಟಿಟಿಲ್ಲೆ. ಇಪ್ಪತ್ತೆ ಕೇಂದ್ರ ಸರಕಾರ ನೇಮಕ ಆಕಿಯೆ ಜಸ್ಟಿಸ್ ರಾಜಿಂದರ್ ಸಾಚಾರ್ ಕಮಿಟಿ ವರದಿ ಕಯಿಂಞಿ ವರ್ಷ ನವೆಂಬರ್ ತಿಂಜತ್ತ್‌ಲ್ ಸರಕಾರತ್ತೊ ಎದುರುಲ್ ಬೆಚ್ಚಿಡ್. ಇದ್‌ಲ್ ಮುಸ್ಲಿಮೀಜಲೆ ಹಾಲತ್ತ್ ಸುಧಾರಣೆ ಆಕೊಗು ಪಲೇ ಸಿಫಾರಸ್ ಈ ಕಮಿಟಿ ಆಕಿಡ್. ಇದ್‌ಡೆದ್ ಜಾರಿಗ್ ತರೊನೂಂಟ್ ಸರಕಾರತ್ತ್‌ಗ್ ಒತ್ತಾಯ ಆಕೊನು.

**೪. ಕೋಮು ಗಲಭೆ ತಡತ್ತೊಗು-ಗಲಭೆಡೆ ಪಿನ್ನೆ ಪರಿಹಾರ ಕಾರ್ಯತ್ತ್‌ಗ್ ಒತ್ತಾಯ :**

ಕೋಮು ಗಲಭೆಜ ತೊಡಕ್ಕಡೆದ್‌ಕ್ ಮುನ್ನೊಲೇ ಸರಕಾರತ್ತ್‌ಗ್ ಗುಪ್ತಾಚಾರಿ ಪೊಲೀಸ್‌ಡೆ ಸೂಚನೆ ಕಿಟಿತಿಕ್ಕ್‌ಡ್. ಇಜತೆ ಸಂದರ್ಭತ್ತ್‌ಲ್ ಸರಕಾರ ಕೂಡ್ಲೆ ಬೇನಾಯೆ ಕ್ರಮಜಲೆ ಎಡ್ಕೊನು. ಇಲ್ಲಾಂತಾಯೆಂಗ್ ಎಲ್ಲೆ ರೀತಿಡೆ ನಷ್ಟತ್ತ್‌ಗ್ ಸರಕಾರಮೇ ಜವಾಬ್ದಾರಿ ಎಡ್ತೊಲೊನು. ಗಲಭೆಡೆ ಪಿನ್ನೆ ಆಯೆದಾಯೆ ನಷ್ಟತ್ತ್‌ಗ್ ಪರಿಹಾರ ಕೂಡಲೇ ಕಿಟ್ಟುಂಪೋಲತ್ತೆ ವ್ಯವಸ್ಥೆ ಆವೊನು, ಗಲಭೆ ಪೀಡಿತ ಮನಿಷಮ್ಮಾರ್ ನಟ್ಟೊಂತಿರಿಯುಂ ಪೋಲತ್ತೆ ಪರಿಸ್ಥಿತಿ ಉಂಡಾವೊನುಗು ತೀರ ಚೆಂತ್ ನಜ ಆಗ್ರಹಿಕ್ಕೊನು.

**೫. ಮೈಕಾಲತ್ತ್‌ಲ್ ಒರು ಸೌಹಾರ್ದ ಕೇಂದ್ರ ತೊರಕ್ಕುಗು ಒತ್ತಾಯ :**

ಈ ಮುನ್ನೊಲು ಚೆನ್ನೆ ಪೋಲೆ ಏದೇ ಸಮುದಾಯವುಂ ಗಲಭೆಗ್ ಒಕ್ಕಲೆ. ಗಲಭೆ ಪಿನ್ನೆ ಅದ್‌ರೆ ರಾಜಕೀಯ ಲಾಭ ಕ್ಷಣಿಕಮಾಯೆದ್. ಜನಾಂಗಿಕ ಸೌಹಾರ್ದತೆ ಶಾಶ್ವತಮಾಯೆದ್. ಇದ್‌ಡೆ ಹಿನ್ನೆಲೆಲ್ ಮೈಕಾಲತ್ತ್ ಒರು ಶಾಶ್ವತಮಾಯೆ ಎಲ್ಲೆ ಖೌಮುಜಲೆ ಸೇರಿತ್ ಸೌಹಾರ್ದ ಕೇಂದ್ರ ಸ್ಥಾಪನೆ ಆಕೊನೂಂಟ್ ಸರಕಾರತ್ತ್‌ಗ್ ಒತ್ತಾಯ ಆಕೊನು.

**<u>ಆಗ ಸಾರ :</u>**

ಬ್ಯಾರಿ ಸಮುದಾಯ ಇತ್ತರೆತೋಲೊ ನಡನ್ನ್ ಬನ್ನೆ ತೆರು ಪೂ ಪಡತ್ತೆದಲ್ಲ, ಮುಳ್ಳು, ಕುಂಟೆ, ಗುಲಿ, ಗುಂಪ್‌ಡೆದ್ ಎಲ್ಲೆ ಸಂಕಷ್ಟಜಲೆ ಕಡನ್ನ್‌ತ್ ನಜ ಆನೇ ಬ್ಯಾರಿ ಸಾಹಿತ್ಯ ಸಮ್ಮೇಳನ ಆಕ್‌ಡೆತ್ತರೆಗ್ ಎತ್ತಿಯ. ಇದ್‌ಕ್ ಕೇಂದ್ರ ಬ್ಯಾರಿ ಸಾಹಿತ್ಯ. ಪರಿಷತ್, ಆಯಿಂಡೆ ನೇತಾಕಮ್ಮಾರ್ ಮುಖ್ಯ ಮಾಯಿತ್ ಜನಾಬ್ ಎಂ.ಬಿ. ಅಬ್ದುರ್ರಹಮಾನ್, ಪಿನ್ನೆ ಅಯಲೊಟ್ಟುಗು ಅವಿರತಮಾಯಿತ್ ಸೊರ ಎಡ್ಕ್‌ಡೆ ಜನಾಬ್ ಯು. ಹೆಚ್. ಉಮರ್ ಪಿನ್ನೆ ಬಳಗ, ಬ್ಯಾರೀಸ್ ವೆಲ್ಫೇರ್ ಎಸೋಸಿಯೇಶನ್‌ಡೆ ಅಧ್ಯಕ್ಷ ಜನಾಬ್ ಬಿ.ಎಂ. ಫಾರೂಕ್ ಪಿನ್ನೆ ಎಸೋಸಿಯೇಶನ್‌ಡೆ ಕಾರ್ಯಕರ್ತಮ್ಮಾರ್, ಚಿಕ್ಕಮಗಳೂರ್‌ಲ್ ಇಂಜನತ್ತೆ ಒರು ಸಮ್ಮೇಳನ ನಡಕ್ಕೊಗಾಯಿತ್ ಅವರಿತ ಶ್ರಮ ಎಡ್ತ್ತ್ ನಂಡೆ ಮೇಲೆ ಪಿರ್ಸ ಬೆಚ್ಚಿತ್ತ್ ಈ ಸ್ಥಾನತ್ತ್‌ಲ್ ದೈಕೊಗು ಆಸ್ಪದಮಾಕಿತನ್ನೆ ಚಿಕ್ಕಮಗಳೂರ್‌ಡೆ ಜಿಲ್ಲಾ ಬ್ಯಾರಿಜಳೆ ಒಕ್ಕೂಟತ್ತೆ ಅಧ್ಯಕ್ಷರಾಯೆ ಕೆ. ಮಹಮ್ಮದ್, ಗೌರವಾಧ್ಯಕ್ಷರಾಯೆ ಜನಾಬ್ ಬಿ.ಎಸ್. ಖಲಂದರ್, ಕಾರ್ಯದರ್ಶಿ ಜನಾಬ್ ಬಿ.ಹೆಚ್. ನೂರ್ ಮುಹಮ್ಮದ್ ಪಿನ್ನೆ ಎಲ್ಲಾ ಮೆಂಬರಮ್ಮಾರ್ ಎಡ್ತೆ ಪರಿಶ್ರಮ ಕಾರಣ. ಮುನ್ನೊಲೂಂ ಖೌಮುಗಾಯಿತ್ ನಲ್ಲೆ ಸೊರ ಎಡ್ಕುಂಪೋಲತ್ತೆ ಅವಕಾಶ ಇಜೊಗ್ ಪಡಚ್ಚೊನು ಕರುಣೆಸಾವಟ್ ಚೆಲ್ಲ್‌ಡೆ ದುವಾತ್ತೋಡು, ನಜಲೆ ಕಡನ್ನ್ ಪೋಯೆ ಕಷ್ಟಜಲೆ ಮರನ್ನ್‌ತ್ ಮುನ್ನೊಲು ನಲ್ಲೆ ಭವಿಷ್ಯತ್ತೆ ಆಗಮನತ್ತ್‌ಗ್ ಆಸೆಲ್ ಕಾತೊಂತು ಇಕ್ಕೊನುಂಟು ಹಾರೈಕೆ ಆಕ್‌ಡೆ. ಈ ಆಸೆಮೇ ಉಜ್ವಲ ಭವಿಷ್ಯತ್ತೆ ಬೆಲಕ್ಕ್ ಆವಟ್ ಚೆಂತ್, ಆ ಕರುಣಾಮಯಿಯಾಯೆ ಪಡಚ್ಚೋನು ತೆರುಕಾಟಟ್ ಚೆಂತ್ ದುವಾ ಆಕಿತ್ ಸಮ್ಮೇಳನತ್ತ್‌ಗ್ ಶುಭ ಆವಟ್ ಚೆಂತ್ ಹಾರೈಕೆ ಆಕ್‌ಡೆ.

● **ಫಕೀರ್ ಮುಹಮ್ಮದ್ ಕಟ್ಪಾಡಿ**

ಜಿಲ್ಲಾ ಒಕ್ಕಲಿಗರ ಸಮುದಾಯ ಭವನ, ಚಿಕ್ಕಮಗಳೂರು

ದಿನಾಂಕ: ೨೭-೨-೨೦೦೭



# ಮರ್‌ಹೂಮ್ ಹಾಜಿ ಮ್ಯೊದಿನ್ ಕುಟ್ಟಿ ಒಂದು ಸ್ಮರಣೆ

'ತಾವಾಯಿತು ತಮ್ಮ ಸಂಸಾರವಾಯಿತು' ಎಂಬುದರಲ್ಲೇ ಕಾಲ ಕಳೆಯುವವರು ಹೆಚ್ಚಿನವರು. ಸಮಾಜ ಸೇವೆಯ ತಮಗಾಸಕ್ತಿಯಿರುವ ನಿರ್ದಿಷ್ಟ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರು ಕೆಲವರು. ಆದರೆ, ತಮ್ಮ ಬದುಕನ್ನೇ ಸಮಾಜಕ್ಕೆ ಅರ್ಪಿಸಿ ಜೀವ ಸವೆಸುವವರು, ಸಮಾಜ ಸೇವೆಯಲ್ಲೇ ಬದುಕಿನ ಸಾರ್ಥಕತೆಯನ್ನು ಅರಸುವವರು ಅಪರೂಪದವರು. ಇಂತಹ ಅಪರೂಪದ ದಿವ್ಯ ಚೇತನ ಮರ್‌ಹೂಮ್ ಹಾಜಿ ಮ್ಯೊದಿನ್ ಕುಟ್ಟಿ(ಮೂಡಿಗೆರೆ)ಯವರು. ಚಿಕ್ಕಮಗಳೂರಿನಲ್ಲಿ ಫೆ. 27ರಂದು ನಡೆಯಲಿರುವ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನದ ವೇದಿಕೆಗೆ ಈ ಮಹಾನ್ ಸಾಧಕರ ಹೆಸರಿಡುವುದರ ಮೂಲಕ ಸಮ್ಮೇಳನಕ್ಕೊಂದು ಅರ್ಥಪೂರ್ಣತೆಯನ್ನು ಕಂಡುಕೊಂಡಿದ್ದಾರೆ ಸಮ್ಮೇಳನದ ಸಂಘಟಕರು.

ಉಡುಪಿ ಜಿಲ್ಲೆಯ ಕುಂದಾಪುರದ ಕೋಡಿಯಿಂದ ವ್ಯಾಪಾರಿಯಾಗಿ ಮಲೆನಾಡು ಪ್ರವೇಶಿಸಿದ್ದ ಹಾಜಿ ಮ್ಯೊದಿನ್ ಕುಟ್ಟಿಯವರು ಮೂಡಿಗೆರೆಯನ್ನು ತನ್ನ ಕಾರ್ಯಕ್ಷೇತ್ರವನ್ನಾಗಿಸಿಕೊಂಡರು. ಪ್ರಾಮಾಣಿಕ ವ್ಯಾಪಾರಿಯಾಗಿ, ಉತ್ತಮ ಕೃಷಿಕರಾಗಿ, ಪ್ರಸಿದ್ಧ ಕಂಟ್ರಾಕ್ಟುದಾರರಾಗಿ, ಮಾದರಿಯೋಗ್ಯ ರಾಜಕಾರಣಿಯಾಗಿ, ಜನಸಾಮಾನ್ಯರ ಕಷ್ಟ-ಸುಖಗಳಿಗೆ ಸ್ಪಂದಿಸುವ ಜನನಾಯಕರಾಗಿ ಬೆಳೆದ ಹಾಜಿಯವರು ಸೇವೆ ಸಲ್ಲಿಸದ ಕ್ಷೇತ್ರಗಳಿಲ್ಲ. ಕಟ್ಟಾ ಧಾರ್ಮಿಕ ಸಂಪ್ರದಾಯಿಯಾಗಿದ್ದು ಇವರು 1940ರಲ್ಲಿ ತನ್ನ ಮನೆಯಲ್ಲೇ ಆರಂಭಿಸಿದ ಮದ್ರಸ **'ಚಿಕ್ಕಮಗಳೂರು ಜಿಲ್ಲೆಯ ಮೊದಲ ಬ್ಯಾರಿಗಳ ಮದ್ರಸ'** ಎಂಬ ಕೀರ್ತಿಗೆ ಪಾತ್ರವಾಗಿದೆ.

ಸುಶಿಕ್ಷಿತ ಸಮುದಾಯ ಮಾತ್ರ ಕಾಲದ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲುದು ಎಂದು ಬಲವಾಗಿ ನಂಬಿದ್ದ ಹಾಜಿಯವರು ತನ್ನ ಮಕ್ಕಳು ಮಾತ್ರವಲ್ಲ, ಸಮಾಜದ ಎಲ್ಲ ಮಕ್ಕಳೂ ಶಾಲೆಗೆ ಹೋಗುವಂತೆ ಪ್ರೇರೇಪಿಸುತ್ತಿದ್ದರು. ಸಹಾಯಹಸ್ತ ನೀಡುತ್ತಿದ್ದರು. ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದರು. ಆದ್ದರಿಂದಲೇ ಇಂದು ಅವರ ಮಕ್ಕಳು ಮತ್ತು ಅಪಾರ ಸಂಖ್ಯೆಯಲ್ಲಿರುವ ಮೊಮ್ಮಕ್ಕಳು ಸುಶಿಕ್ಷಿತರಾಗಿ ದೇಶ ವಿದೇಶಗಳಲ್ಲಿ ಹೆಸರುಗಳಿಸುತ್ತಿದ್ದಾರೆ. ಉದ್ದಿಮೆ, ವೈದ್ಯಕೀಯ, ತಾಂತ್ರಿಕ ಹಾಗೂ ಸೇವಾ ಕ್ಷೇತ್ರಗಳಲ್ಲಿ ಮಿಂಚುತ್ತಿದ್ದಾರೆ.

ಮದ್ದುಗುಂಡು ತಯಾರಿಕೆಯಲ್ಲಿ ನಿಪುಣರಾಗಿದ್ದ ಮ್ಯೊದಿನ್ ಕುಟ್ಟಿ ಹಾಜಿಯವರು ಪಂಚಾಯತ್ ಕಟ್ಟೆಯ ನಾಯಕತ್ವ ವಹಿಸಿ ನೀಡುವ ತೀರ್ಮಾನಗಳು ಗರ್ನಲ್‌ಗಳಂತೆ ಸಿಡಿಯುತ್ತಿದ್ದವು. ಇವರ ನ್ಯಾಯತೀರ್ಪಿಗೆ ಎಲ್ಲ ಸ್ತರದ ಜನರೂ ತಲೆ ದೂಗುತ್ತಿದ್ದರು. ಮೂಡಿಗೆರೆ ಪುರಸಭೆಗೆ ಸುಮಾರು 20 ವರ್ಷಗಳ ಕಾಲ ಸದಸ್ಯರಾಗಿ ಸೇವೆ ಸಲ್ಲಿಸಿದ ಹಾಜಿಯವರು ಬಡವ-ಬಲ್ಲಿದ, ಜಾತಿ-ಮತ-ಭಾಷೆಗಳ ಬೇಧವಿಲ್ಲದೆ ಎಲ್ಲರ ಜನನಾಯಕರಾಗಿದ್ದರು. ಆದ್ದರಿಂದಲೇ ಮೂಡಿಗೆರೆಯ ರಸ್ತೆಯೊಂದಕ್ಕೆ ಹಾಜಿಯವರ ಹೆಸರಿಡಲಾಗಿದೆ.

ಅನಾಥ ಮಕ್ಕಳನ್ನು ಅತಿಯಾಗಿ ಪ್ರೀತಿಸುತ್ತಿದ್ದ ಇವರು ತನ್ನ ಮಕ್ಕಳೊಂದಿಗೆ ಮನೆಯಲ್ಲೇ ಅನೇಕ ಅನಾಥ ಮಕ್ಕಳನ್ನು ಬೆಳೆಸಿದರು. ಜನಾನುರಾಗಿಯಾಗಿ, ಕೊಡುಗೈ ದಾನಿಯಾಗಿ, ಸಮಾಜ ಸುಧಾರಕರಾಗಿ, ಹಸಿದ ಹೊಟ್ಟೆಗೆ ಉಣ ಬಡಿಸುವ ಅನ್ನದಾತರಾಗಿ ಮಾದರಿ ಜೀವನವನ್ನು ಸಾಗಿಸಿದ ಮ್ಯೊದಿನ್ ಕುಟ್ಟಿ ಹಾಜಿಯವರು ಮೈಸೂರಿನ ದಿವಾಣ ಸರ್ ಮಿರ್ಝಾ ಇಸ್ಮಾಈಲ್‌ರಿಂದಲೂ ಗೌರವಿಸಲ್ಪಟ್ಟವರು.

ಚಿಕ್ಕಮಗಳೂರಿನಲ್ಲಿ ದಿನಾಂಕ 27-2-2007ರಂದು ನಡೆಯುತ್ತಿರುವ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನದ ವೇದಿಕೆಗೆ ಮರ್‌ಹೂಮ್ ಹಾಜಿ ಮ್ಯೊದಿನ್ ಕುಟ್ಟಿ(ಮೂಡಿಗೆರೆ)ಯವರ ಹೆಸರಿಡುವುದರ ಮೂಲಕ ನಮ್ಮ ಸಾಮಾಜಿಕ ಬದ್ಧತೆಗೆ ಸ್ಫೂರ್ತಿ ದೊರೆತಂದಾಗಿದೆ. 1960ರಲ್ಲಿ ದಿವಂಗತರಾದ ಹಾಜಿಯವರಿಗೆ ಸೃಷ್ಟಿಕರ್ತನು ಮಗ್ಫಿರತ್ ಮತ್ತು ಮರ್ಹಮತ್ ನೀಡಲಿ.

IMPRESS, Mangalore @ 98450 54191